ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 8 ಫೆಬ್ರವರಿ 21, 1982 ಬೆಲೆ 60 ಪೈಸೆ

23-2-1982 ರಂದು ಧರಣಿ ಮುಷ್ಕರ

ಅಖಿಲ ಭಾರತ ಸಾರ್ವತ್ರಿಕ ಮುಷ್ಕರ 19-1-1982 ರಂದು ನಡೆದಾಗ ಅನೇಕ ಕಡೆ ಕಾರ್ಮಿಕ-ನೌಕರರನ್ನು, ಕೆಲಸದಿಂದ ತೆಗೆದು ಹಾಕಲಾಗಿದೆ. ಹದಿನಾರು ಕೈಗಾರಿಕೆಗಳಲ್ಲಿ ಚಳುವಳಿ-ಮುಷ್ಕರ ನಡೆಸದಂತೆ (ಮುಷ್ಕರ ನಡೆಸಿದರೆ) ಸಂಬಂಧ ಪಟ್ಟವರನ್ನು ರಾಷ್ಟ್ರೀಯ ಭದ್ರತಾ ಶಾಸನದ ಪ್ರಕಾರ ಬಂಧಿಸಲು ಸಾಧ್ಯವಾಗುವಂತೆ ಕೇಂದ್ರ ಸರಕಾರ ಪ್ರಕಟಣೆ ಹೊರಡಿಸಿದೆ.

ನೌಕರಿಯಿಂದ ತೆಗೆದು ಹಾಕಿರುವ ಆಜ್ಞೆಗಳನ್ನು ರದ್ದು ಪಡಿಸ ಬೇಕೆಂದು ಒತ್ತಾಯಿಸಲು, ಈ ಹದಿನಾರು ಕೈಗಾರಿಕೆಗಳಲ್ಲಿ ನಡೆಯುವ ಮುಷ್ಕರ-ಚಳುವಳಿಗಳ ಹಕ್ಕುಗಳನ್ನು ಕಸಿಯುವ ಕ್ರಮವನ್ನು ಪ್ರತಿಭಟಿಸಲು 23-2-1982 ರಂದು ದೇಶಾದ್ಯಂತ ಕಾರ್ಮಿಕ-ನೌಕರರು ಸರಕಾರಿ ಕಚೇರಿಗಳ ಮುಂದೆ ಧರಣಿ ಮುಷ್ಕರ ನಡೆಸಬೇಕೆಂದು ರಾಷ್ಟ್ರೀಯ ಚಳುವಳಿ ಸಮಿತಿಯು ಕರೆಕೊಟ್ಟಿದೆ. ಈ ಧರಣಿ ಸತ್ಯಾಗ್ರಹವನ್ನು ಯಶಸ್ವಿಗೊಳಿಸಬೇಕೆಂದು ರಾಜ್ಯ ಸಿ.ಐ.ಟಿ.ಯು. ಸಮಿತಿ ಕರೆ ಕೊಡುತ್ತದೆ.

ಸಂಪಾದಕೀಯ

ರಾವ್ ರಾಜೀನಾಮೆ ಕೊಡಲಿ

ಎಲ್ಲ ಕಾಯಿದೆ-ಕಾನೂನುಗಳನ್ನು ಮುರಿದು ಹತ್ತು ಸಾವಿರ ಟನ್ ಸಿಮೆಂಟನ್ನು ಹಲವು ಅಂತಸ್ತಿನ ಕಟ್ಟಡಗಳನ್ನು ಕಟ್ಟುತ್ತಿರುವ ಸಂಸ್ಥೆಗಳಿಗೆ ಮಾರಾಟ ಮಾಡಿರುವ ಗುಂಡೂರಾವ್ ಸರಕಾರದ ನೀತಿ ಅತ್ಯಂತ ಖಂಡನೀಯ. ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಅಂತುಲೆಯವರು ತಾವು ಮಾಡಿರುವ ಸಿಮೆಂಟ್ ಅವ್ಯವಹಾರವನ್ನು ಒಪ್ಪಿಕೊಳ್ಳುವ ಸೌಹಾರ್ದತೆಯನ್ನು ತೋರಿಸಿದ್ದರು. ಆದರೆ ನಮ್ಮ ರಾಜ್ಯದ ಮುಖ್ಯ ಮಂತ್ರಿಯವರು ಕಟ್ಟಡ ಕೆಲಸಗಳಲ್ಲಿ ದುಡಿಯುತ್ತಿರುವ ಕೂಲಿಗಾರರು ಉಪವಾಸ ಬೀಳುವುದನ್ನು ತಪ್ಪಿಸಲು ಅಭಿವೃದ್ಧಿ ಯೋಜನೆಗಳಿಗಾಗಿ ಉಪಯೋಗವಾಗಬೇಕಾಗಿದ್ದ ಸಿಮೆಂಟ್‌ನ್ನು ದೊಡ್ಡ ಕಟ್ಟಡ ಕಟ್ಟುವ ಸಂಸ್ಥೆಗಳಿಗೆ ಒದಗಿಸಲಾಗಿದೆಂದು ಹೇಳಿ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಮಾಡುತ್ತಿರುವ ಪ್ರಯತ್ನ ನಿಜವಾಗಿಯೂ ನಾಚಿಕೆಗೇಡಿಯಾಗಿದೆ. ಬಡ-ಮಾಧ್ಯಮ ವರ್ಗದವರಿಗೆ ಸಿಮೆಂಟಿನ ಧೂಳನ್ನು ಮೂಸಿನೋಡುವ ಅವಕಾಶ ಸಿಗದಿರುವಾಗ, ವಿದ್ಯುಚ್ಛಕ್ತಿ, ನೀರಾವರಿ, ಪ್ರಾಥಮಿಕ ಶಾಲೆಗಳು, ನೀರು ಪೂರೈಕೆ ಮುಂತಾದ ಹಲವಾರು ಮಹತ್ತರವಾದ ಅಭಿವೃದ್ಧಿ, ಅವಶ್ಯಕ ಕೆಲಸಗಳು ಸಿಮೆಂಟಿನ ಅಭಾವದಿಂದಾಗಿ ಕೆಲಸಗಳನ್ನೆಲ್ಲ ಸ್ಥಗಿತಗೊಳಿಸಿರುವಾಗ, ಅಲ್ಲಿ ದುಡಿಯುತ್ತಿರುವ ಸಾವಿರಾರು ಬಡ ಕಾರ್ಮಿಕರು ಉಪವಾಸ ಬಿದ್ದಿರುವಾಗ, ಕಟ್ಟಡ ಕಾರ್ಮಿಕರ ನೆಪ ಹೇಳಿ ತನ್ನ ತಪ್ಪನ್ನು ಮುಚ್ಚಿಕೊಳ್ಳಲು, ಗುಂಡೂರಾವ್ ಪ್ರಯತ್ನ ನಡೆಸಿದ್ದಾರೆ. ವಿಧಾನಮಂಡಲದ ಸಾರ್ವಜನಿಕ ಲೆಕ್ಕ ಸಮಿತಿ ಮುಂದೆ ಸಾಕ್ಷಿ ಹೇಳಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಬೆದರಿಕೆಯನ್ನು ಹಾಕಿದ್ದಾರೆ.

ಭ್ರಷ್ಟಾಚಾರ, ಸ್ವಜನ ಪಕ್ಷಪಾತಗಳಿಂದ ತುಂಬಿ ತುಳುಕುತ್ತಿರುವ ಗುಂಡೂರಾವ್ ಸರ್ಕಾರ ರಾಜೀನಾಮೆ ಕೊಡಲೇಬೇಕು. ಮಹಾರಾಷ್ಟ್ರದ ಜನತೆ, ಎಲ್ಲ ವಿರೋಧಿ ಪಕ್ಷಗಳು, ಯಾವ ರೀತಿ ಅಂತುಳೆ ವಿರುದ್ಧ ಸಾರ್ವಜನಿಕವಾಗಿಯೂ ಕೋರ್ಟಿನೊಳಗಡೆಯೂ ಹೋರಾಟ ನಡೆಸಿದರೋ, ಕರ್ನಾಟಕದ ಜನತೆ ರೇಣುಕಾ ರಾಜೇಂದ್ರನ್ ಮತ್ತು ಇಬ್ರಾಹಿಂ ರಾಜೀನಾಮೆಗಾಗಿ ಚಳುವಳಿ ಹೂಡಿದ್ದರೋ, ಈಗ ಗುಂಡೂರಾವ್ ಮಂತ್ರಿ ಮಂಡಲ ರಾಜೀನಾಮೆ ಕೊಡಬೇಕೆಂದು ಪ್ರಚಂಡ ಹೋರಾಟ ನಡೆಸಲೇಬೇಕು. ಸಿಮೆಂಟ್ ಹಗರಣ ಬಯಲಿಗೆಳೆದು ಗುಂಡೂರಾವ್ ಮಂತ್ರಿ ಮಂಡಲದ ರಾಜೀನಾಮೆಗೆ ಹೋರಾಟ ನಡೆಸೋಣ!

ಸಿಮೆಂಟ್ ಹಗರಣ!—

ದರೋಡೆಖೋರರನ್ನು ಹತ್ಯೆ ಮಾಡುವ ಹೆಸರಲ್ಲಿ ಜನರನ್ನು ಕೊಂದು ದರೋಡೆಖೋರರ ಹಣದ ಸಹಾಯದಿಂದ ಆರಿಸಿ ಬಂದ ವಿಧಾನಸಭಾ ಸದಸ್ಯರ ಬಲದಿಂದ ಉತ್ತರ ಪ್ರದೇಶದ ಮುಖ್ಯ ಮಂತ್ರಿ ಭದ್ರವಾಗುಳಿದಿದ್ದಾರೆ. ಹರಿಜನ-ಗಿರಿಜನರನ್ನು ಅಮಾನುಷ ರೀತಿಯಲ್ಲಿ ಕೊಲೆಗೈಯ್ಯುತ್ತಿರುವ ಬಿಹಾರಿನ ಮುಖ್ಯ ಮಂತ್ರಿ ರಕ್ತದ ಮಡುವಿನಲ್ಲಿ ಮುಳುಗಿ ತೇಲಾಡುತ್ತಿದ್ದಾರೆ.

ಕಂಟ್ರಾಕ್ಟರಿಗೆ ಹೆಚ್ಚಿನ ಬೆಲೆಯಲ್ಲಿ ಸಿಮೆಂಟ್ ಮಾರಾಟ ಮಾಡಿ ಇಂದಿರಾ ಪ್ರತಿಷ್ಠಾನದ ಹೆಸರಲ್ಲಿ ರೂ. 135 ಕೋಟಿಗಿಂತಲೂ ಹೆಚ್ಚು ಹಣ ಸಂಗ್ರಹಿಸಿದ ಮಹಾರಾಷ್ಟ್ರದ ಮುಖ್ಯ ಮಂತ್ರಿ ಅಂತುಳೆಯವರನ್ನು ಇಂದಿರಾ ಗಾಂಧಿ ಉಳಿಸಿದ್ದರೂ ಹೈಕೋರ್ಟಿನ ನಿರ್ಣಯ ಅವರನ್ನು ಅಧಿಕಾರ ಗದ್ದುಗೆಯಿಂದ ಉರುಳಿಸಿದೆ.

ಇಪ್ಪತ್ತು-ಇಪ್ಪತ್ತೈದು ಕಾರ್ಯಕ್ರಮಗಳ ಹೆಸರಿನಲ್ಲಿ ಬಡಜನತೆಯನ್ನು ಹರಿಜನ-ಗಿರಿಜನ - ಮುಸಲ್ಮಾನರನ್ನೆಲ್ಲ ಮರಳುಗೊಳಿಸಿ ಓಟು ಗಿಟ್ಟಿಸುತ್ತಿರುವಾಗ ಕಂಟ್ರಾಕ್ಟರರು, ಗುತ್ತೆದಾರಿ ಬಂಡವಾಳದಾರರು, ಕಾರ್ಖಾನೆ ಮಾಲಿಕರೆಲ್ಲ ಅಪಾರ ಧನಸಹಾಯ ಮಾಡುತ್ತಿರುವಾಗ ಬಡವರ ಉದ್ಧಾರದ ಹೆಸರಿನಲ್ಲಿ ಅಧಿಕಾರ ನಡೆಸುತ್ತಿರುವ ಇಂದಿರಾ ಸಾಮ್ರಾಜ್ಯದಲ್ಲಿ ಸಿಮೆಂಟ್ ನುಂಗಿದರೂ, ಬಡವರ ರಕ್ತ ಚೆಲ್ಲಿದರೂ, ದರೋಡೆಖೋರರ ಹಣ ತಿಂದರೂ ಯಾವ ಅಪಾಯವಿಲ್ಲದೆ ನಿರಾತಂಕ ಆಡಳಿತೆ ನಡೆಸುವಂತೆ ಆಶೀರ್ವಾದ ದೊರಕಿರುವಾಗ "ನಾನ್ಯಾಕೆ ಅದನ್ನೇ ಮಾಡಬಾರದು" ಎಂಬ ಯೋಚನೆಯಿಂದ ನಮ್ಮ ರಾಜ್ಯದ ಮುಖ್ಯಮಂತ್ರಿ ಗುಂಡೂರಾಯರು ಸಿಮೆಂಟಿನ ಅವ್ಯವಹಾರ ನಡೆಸಿ ಕಾಲು ನಿಗಿಸಿಕೊಂಡಿದ್ದಾರೆ.

ನಗರದ ಹಲವು ಅಂತಸ್ತಿನ ಕಟ್ಟಡಗಳಿಗೆ 4 ಸಾವಿರ ಟನ್ ಸಿಮೆಂಟ್ ಹಂಚಿಕೆಯಲ್ಲಿ ಮಂತ್ರಿಗಳ ಕೈವಾಡವಿದೆ. ಇದರ ಕುರಿತು ನ್ಯಾಯಾಂಗ ವಿಚಾರಣೆ ನಡೆಯಬೇಕೆಂದು ವಿಧಾನ ಮಂಡಲದ ಸಾರ್ವಜನಿಕ ಲೆಕ್ಕ ಸಮಿತಿ ವರದಿ ಮಾಡಿದೆ. ಸಿಮೆಂಟ್ ಅವ್ಯವಹಾರದ ಕುರಿತು ವರದಿ ನಮೂದಿಸಿರುವ ಆರೋಪ ಸತ್ಯಕ್ಕೆ ದೂರವಾಗಿದೆಂದು ಮುಖ್ಯ ಮಂತ್ರಿ ಗುಂಡೂರಾಯರು ಸಾರ್ವಜನಿಕ

ಗುಂಡೂರಾವ್ ಬಲಿ?

ಹೇಳಿಕೆ ನೀಡಿದ್ದಾರೆ. ಸಾರ್ವಜನಿಕ ಲೆಕ್ಕ ಸಮಿತಿಯಲ್ಲಿ ಬಹುಸಂಖ್ಯ ಸದಸ್ಯರು ಗುಂಡೂರಾವ್ ಪಾರ್ಟಿಯವರೇ ಇರುವಾಗ ಅವರ ಸಹಿಗಳಿಂದಲೇ ಪ್ರಕಟವಾದ ವರದಿ ಒಳಗೊಂಡ ಆರೋಪವನ್ನು ಅಷ್ಟು ಹಗುರವಾಗಿ ನಿರಾಕರಿಸಿದರೆ ನಂಬುವವರಾರು ?

ಬಡವರಿಗೆ, ಮಧ್ಯಮ ವರ್ಗದವರಿಗೆ ಮನೆ ಕಟ್ಟಲು, ರಿಪೇರಿ ಮಾಡಲು ಒಂದೆರಡು ಚೀಲ ಸಿಮೆಂಟ್ ಲಭ್ಯವಾಗದಿರುವಾಗ ಗಗನ ಚುಂಬಿ ಕಟ್ಟಡಗಳನ್ನು ನಿರ್ಮಿಸುತ್ತಿರುವ ಸಿರಿವಂತರಿಗೆ 4 ಸಾವಿರ ಸಿಮೆಂಟ್ ಕೊಡ ಮಾಡಿದ್ದರಲ್ಲಿ ಅವ್ಯವಹಾರವಾಗಿಲ್ಲೆಂದು ಎದೆತಟ್ಟಿ ಹೇಳುವ ಮಂತ್ರಿಗಳ ಧೈರ್ಯ ಅಪಾರವೆಂದೇ ಹೇಳಬೇಕಲ್ಲ! ಕೋಟ್ಯಾವಧಿ ರೂಪಾಯಿ ಬೆಲೆಯ ಸಿಮೆಂಟಿನ ಅವ್ಯವಹಾರ ಮಾಡಿದ ಅಂತುಳೆಯವರನ್ನು ಕೋರ್ಟು ದೋಷಿಯೆಂದು ಪರಿಗಣಿಸಿದರೂ ಕೂಡ, ಅವರು ನಿರ್ದೋಷಿಯೆಂದು ಇಂದಿರಾ ಗಾಂಧಿಯವರೇ ಸಾರಿರುವಾಗ, 4 ಸಾವಿರ ಟನ್ನಿನ ಅವ್ಯವಹಾರಕ್ಕೆ ಅಂಜುವಕಾರಣವೇನಿದೆ? ಹೆಚ್ಚು ಬೆಲೆಯಲ್ಲಿ ಸಿಮೆಂಟ್ ಮಾರಿ ಚೆಕ್ಕಿನ ಮೂಲಕ ಬಡವರ ಉದ್ಧಾರ ಹಣ ಸಂಗ್ರಹಿಸಿದ್ದೇನೆಂದು ಹೇಳುವ ಧೈರ್ಯ ಅಂತುಳೆಯವರಿಗಿದೆ. ಅಂಥ ಗಂಡಸುತನ ಗಂಡೆದೆಯು ಗುಂಡೂರಾಯರಿಗೆ ಮಾತ್ರ ಇಲ್ಲ. ಅಂತುಳೆಯವರಿಗೆ ಇಂದಿರಾ ಗಾಂಧಿ ಪ್ರತಿಷ್ಠಾನದ ರಕ್ಷಣೆ ಇದೆ. ಇಲ್ಲಿ ಗುಂಡೂರಾಯರಿಗೆ ಮಾತ್ರ ಯಾವ ಅಮ್ಮನ ರಕ್ಷಣೆ ಇದ್ದಂತೆ ಕಂಡುಬರುವುದಿಲ್ಲ. ಆದ್ದರಿಂದಲೇ ಹಣದ ಕೈವಾಡವಿಲ್ಲೆಂಬ ಧೈರ್ಯದ ಮಾತನ್ನಾಡುತ್ತಿದ್ದಾರೆ.

ಸಿಮೆಂಟಿನ ಅಭಾವದಿಂದಾಗಿ ಹಲವಾರು ಸಾರ್ವಜನಿಕ ಸರಕಾರಿ ಕೆಲಸಗಳು ನಿಂತು ಹೋಗಿವೆ. ಕಾರಣ ಹೆಚ್ಚು ಸಿಮೆಂಟ್ ಒದಗಿಸಬೇಕೆಂದು ಕೇಂದ್ರ ಸರಕಾರಕ್ಕೆ ತಂತಿ ಕಳುಹಿಸಲಾಗಿತ್ತೆಂದೂ, 10 ಸಾವಿರ ಟನ್ ಸಿಮೆಂಟು

8ನೇ ಪುಟ ನೋಡಿ

ಜನವಾದಿ ಲೇಖಕರ ಸಮ್ಮೇಳನಕ್ಕೆ ಶುಭಾಶಯಗಳು

ಶೋಷಿತರ ಉನ್ನತಿಗೋಸ್ಕರ ಸಾಹಿತ್ಯ ಸೃಷ್ಟಿಯಾಗಬೇಕು; ಮಾನವ ಮಾನವನ ಮೇಲೆ ನಡೆಸುವ ಶೋಷಣೆಯನ್ನು ತಡೆಗಟ್ಟಲು ಸಾಮಾಜಿಕ ಅನಿಷ್ಟಗಳ ವಿರುದ್ಧ ಸಾಹಿತಿ ಶ್ರಮಿಸಬೇಕೇ ವಿನಃ 'ಕಲೆಗಾಗಿ ಕಲೆ' 'ಶುದ್ಧ ಸಾಹಿತ್ಯ' ಎಂಬ ಜನವಿರೋಧಿ ನಿಲುವು ತಳೆಯಬಾರದು.

ಈ ಆಶಯಕ್ಕೆ ರೂಪ ಕೊಟ್ಟು ಪುರೋಗಾಮಿ ಲೇಖಕರನ್ನು ಸಂಘಟಿಸಲು ವೇದಿಕೆಯೊಂದು ಜನ್ಮ ತಾಳಿದೆ. ಸಧ್ಯಕ್ಕೆ ಹಿಂದೀ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರುವ ಈ ಲೇಖಕರ ಸಂಘಟನೆಯ ಸಮ್ಮೇಳನವು ಫೆಬ್ರವರಿ 13 ಮತ್ತು 14 ರಂದು ದೆಹಲಿಯಲ್ಲಿ ನಡೆಯಿತು. ಖ್ಯಾತ ಹಿಂದೀ ಲೇಖಕಿ ಶ್ರೀಮತಿ ಮಹಾದೇವಿ ವರ್ಮಾ ಈ ಸಮ್ಮೇಳನ ಉದ್ಘಾಟಿಸಿದ್ದಾರೆ. (ಪೂರ್ತಿ ವಿವರಗಳು ಇನ್ನೂ ಲಭ್ಯವಿಲ್ಲ)

ಸಮ್ಮೇಳನಕ್ಕೆ ಕರ್ನಾಟಕದ ಖ್ಯಾತ ಸಾಹಿತಿ ಶ್ರೀ ನಿರಂಜನ ಮತ್ತು ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕರಲ್ಲೊಬ್ಬರಾದ ಶ್ರೀ ಬರಗೂರು ರಾಮಚಂದ್ರಪ್ಪನವರು ಶುಭ ಕೋರಿ ಸಂದೇಶ ಕಳುಸಿದ್ದರು.

ಶ್ರೀ ನಿರಂಜನರು ಕಳಿಸಿದ ಸಂದೇಶದ ಪೂರ್ತಿ ಪಾಠ ಇಂತಿದೆ.

"ಕಾಲದ ಪಂಥಾಹ್ವಾನವನ್ನು ನಾವು ಎದುರಿಸೋಣ! ಬದುಕಿಗೆ ಬದ್ಧರಾಗಿರುವ ದೇಶದ ಎಲ್ಲ ಕ್ರಾಂತಿಕಾರಿ ಬರೆಹಗಾರರು ಸಾಹಿತ್ಯ ಸಾಂಸ್ಕೃತಿಕ ವಲಯವನ್ನು ಪುನರುದ್ದೀಪನಗೊಳಿಸಲು ತಮ್ಮೆಲ್ಲವನ್ನೂ ಪಣವಾಗಿಡಬೇಕು."

"ಸರ್ವಾಧಿಕಾರತ್ವದ ಶಕ್ತಿಗಳಿಗೆ ಇದು ನಮ್ಮ ತಾಕೀತು : 'ದಾರಿ ಬಿಡೆವು'! (NO PASARAN)

"ಈ ಘಳಿಗೆಯಲ್ಲಿ ಅಗತ್ಯವಾಗಿರುವುದು ಎಲ್ಲಾ ಪ್ರಗತಿಪರರ ಐಕ್ಯ ಮತ್ತು ಸಂಘಟಿತ ಕಾರ್ಯಾಚರಣೆ."

"ಸಮ್ಮೇಳನಕ್ಕೆ ಎಲ್ಲ ಯಶಸ್ಸನ್ನೂ ಕೋರುವೆ."

ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕ ಶ್ರೀ ಬರಗೂರು ರಾಮಚಂದ್ರಪ್ಪನವರು ಸಮ್ಮೇಳನಕ್ಕೆ ಶುಭ ಹಾರೈಸಿ ಸಂದೇಶ ಕಳಿಸಿದ್ದಾರೆ. ಪೂರ್ತಿ ಪಾಠ ಇಂತಿದೆ;

"ಎಲ್ಲ ಜನತಾಂತ್ರಿಕ ಲೇಖಕರ ಸಂಘಟನೆ ನಮ್ಮ ಕಾಲದ ಅವಶ್ಯಕತೆ, ನಿಮ್ಮದು ಸಕಾಲಿಕ ಹೆಜ್ಜೆ."

"ಸಮ್ಮೇಳನ ಅರ್ಥಪೂರ್ಣವಾಗಲಿ; ಯಶಸ್ವಿಯಾಗಲಿ."

ವಿದ್ಯಾಭ್ಯಾಸದ ಪ್ರಜಾಪ್ರಭುತ್ವೀಕರಣ

[ಜನವರಿ 9, 10, 11ರಂದು ಕಣ್ಣನೂರಿನಲ್ಲಿ ನಡೆದ ಕೇರಳ ರಾಜ್ಯ ಎಸ್. ಎಫ್. ಐ. 10ನೇ ಸಮ್ಮೇಳನದ ಅಂಗವಾಗಿ "ಶೈಕ್ಷಣಿಕ ಸಮಸ್ಯೆಗಳು ಮತ್ತು ವಿದ್ಯಾರ್ಥಿ ಸಂಘಟನೆಗಳು" ಎಂಬ ವಿಷಯದ ಬಗ್ಗೆ ನಡೆಸಲಾದ ವಿಚಾರ ಸಂಕಿರಣದಲ್ಲಿ ಕೇರಳದ ಮಾಜಿ ಮುಖ್ಯ ಮಂತ್ರಿ ಕಾಂ| ಇ ಕೆ. ನಾಯನಾರ್ ಮತ್ತು ಕೇರಳ ರಾಜ್ಯ ಎಸ್.ಎಫ್.ಐ. ಸಮಿತಿಯ ಮಾಜಿ ಅಧ್ಯಕ್ಷ ಕಾಂ| ಥೋಮಸ್ ಐಸಕ್‌ರವರು ಮಾಡಿದ ಭಾಷಣದ ಕೆಲವು ಮುಖ್ಯ ವಿಚಾರಗಳನ್ನು ಸಂಗ್ರಹಿಸಿ ಈ ಕೆಳಗೆ ಕೊಡಲಾಗಿದೆ.]

ಕಾಂ| ಇ.ಕೆ. ನಾಯನಾರ್ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ "ಶಿಕ್ಷಣ ಪದ್ಧತಿಯು ಪ್ರಜಾಪ್ರಭುತ್ವ ಮೌಲ್ಯಗಳನ್ನು ಒಳಗೊಂಡು ಈಗಿನ ಸಮಾಜಕ್ಕೆ ಸ್ಪಂಧಿಸುವಂತಿರಬೇಕು. ವಿದ್ಯಾಭ್ಯಾಸ ಪದ್ಧತಿಯಲ್ಲಿ ಪ್ರಜಾಪ್ರಭುತ್ವವಾದಿ ಪರಿವರ್ತನೆಯಾದ ನಂತವಷ್ಟೇ ಅದರಲ್ಲಿ ಸಮಾಜವಾದಿ ಬದಲಾವಣೆಯನ್ನುಂಟು ಮಾಡಲು ಸಾಧ್ಯ" ಎಂದರು.

ಕಾಂ| ನಾಯನಾರ್ ಮುಂದುವರೆದು "ನಮ್ಮ ದೇಶವನ್ನು 'ಸಮಾಜವಾದಿ' ಎಂದು ಕರೆಯಲಾಗಿದೆ. ಈ ಬಗ್ಗೆ ಸಂವಿಧಾನದಲ್ಲೂ ಬರೆದಿಡಲಾಗಿದೆ. ಆದರೆ ಕಳೆದ 34 ವರ್ಷಗಳ ಅನುಭವವು ಆಳುವ ಪಕ್ಷ ಸಮಾಜವಾದಿ ಮಾರ್ಗದತ್ತ ದೇಶವನ್ನು ಕೊಂಡೊಯ್ಯುವ ನಿಟ್ಟಿನಲ್ಲಿ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲವೆಂದು ಸ್ಪಷ್ಟಪಡಿಸಿದೆ. ಜನಸಾಮಾನ್ಯರು ನಿತ್ಯ ನಿರಂತರ ಶೋಷಣೆಗೆ ಒಳಗಾಗುತ್ತಿದ್ದಾರೆ. ಇಂದು ಸಮಾಜವಾದಿ ಸಿದ್ಧಾಂತ ಯಾರಿಂದಲೂ ತಿರಸ್ಕರಿಸಲು ಸಾಧ್ಯವಿಲ್ಲದಂತಹ ಭೌತಿಕ ವಾಸ್ತವವಾಗಿದೆ. ಆದ್ದರಿಂದ ಎಲ್ಲಾ ಜನರೂ ಸಮಾಜವಾದವನ್ನು ಹೇಳುತ್ತಿದ್ದಾರೆ. ಆದರೆ ವೈಜ್ಞಾನಿಕ ಸಮಾಜವಾದದ ಸ್ಥಾಪನೆಯ ಪ್ರಶ್ನೆ ಬಂದಾಗ ಅದನ್ನು ವಿರೋಧಿಸುವ 'ಸಮಾಜವಾದಿ'ಗಳೂ ಇದ್ದಾರೆ. ಕಾಂಗ್ರೆಸ್ ಪಕ್ಷವು ತುಂಬಾ ವರ್ಷಗಳ ಹಿಂದೆಯೇ ತನ್ನ ಸಮ್ಮೇಳನದಲ್ಲಿ ಸಮಾಜವಾದಿ ನಿಲುವನ್ನು ಅಂಗೀಕರಿಸಿತ್ತು. 'ರಾಮರಾಜ್ಯ', 'ಸುಖೀ ರಾಷ್ಟ್ರ' ಎಂಬ ಶಬ್ಧಗಳ ಸ್ಥಾನದಲ್ಲಿ 'ಸಮಾಜವಾದ'ವನ್ನು ಸೇರಿಸಲಾಯಿತು. ಸಮಾಜವಾದವನ್ನು ತಿರಸ್ಕರಿಸಲು ಸಾಧ್ಯವಿಲ್ಲದಂತಹ ಸನ್ನಿವೇಶದಲ್ಲಿ ಅದನ್ನು ಅದು ಅಂಗೀಕರಿಸಿತು. ಆದರೆ ಇಂದು ನಮ್ಮ ದೇಶದಲ್ಲಿ ಸಮಾಜವಾದವನ್ನು ಕಾರ್ಯಗತಗೊಳಿಸುವುದನ್ನು ತಡೆಯುವ ಪ್ರಮುಖ ವೈರಿಯೇ ಕಾಂಗ್ರೆಸ್ ಆಗಿದೆ."

ಶಿಕ್ಷಣವಿಲ್ಲದ ಯಾವ ದೇಶವೂ ಪ್ರಗತಿ ಹೊಂದಲು ಸಾಧ್ಯವಿಲ್ಲ. ಸಮಾಜವಾದಿ ರಾಷ್ಟ್ರಗಳಲ್ಲಿ ಪ್ರತಿಯೊಬ್ಬರಿಗೂ ಶಿಕ್ಷಣ ನೀಡಲಾಗಿದೆ. ವಿಯೆಟ್ನಾಂ ವಿಮೋಚನೆ ಹೊಂದಿದಾಗ ಕೇವಲ 22 ಶೇಕಡದಷ್ಟು ಮಾತ್ರ ಅಲ್ಲಿ ಸಾಕ್ಷರತೆ ಇತ್ತು. ಆದರೆ ಕೇವಲ ಒಂದು ವರ್ಷದ ಅವಧಿಯಲ್ಲಿ ಅವರಿಗೆ ಬಹುಪಾಲು ಜನರಿಗೆ ಶಿಕ್ಷಣ ನೀಡಲು ಸಾಧ್ಯವಾಯಿತು. ಆದರೆ ನಮ್ಮ ದೇಶದ ಸ್ಥಿತಿಯೇನಾಗಿದೆಯೆಂದು ವಿದ್ಯಾರ್ಥಿಗಳು ಸರಿಯಾಗಿ ಗಮನಿಸಬೇಕು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ 3ದಶಕಗಳೇ ಕಳೆದರೂ ಶೇಕಡ 70ರಷ್ಟು ಜನರು ಅವಿದ್ಯಾವಂತರಾಗಿದ್ದಾರೆ. ಭಾರತದಲ್ಲಿ ಅಳವಡಿಸಲಾಗಿರುವ ಮಿಶ್ರ ಆರ್ಥಿಕ ವ್ಯವಸ್ಥೆ (Mixed Economy)ಯೇ ಶಿಕ್ಷಣ ರಂಗದಲ್ಲೂ ಪ್ರತಿಫಲನವಾಗಿದೆ. ಸರಕಾರಿ ಮಾಧ್ಯಮದ ಹೆಸರಿನಲ್ಲಿ ಖಾಸಗಿ ವ್ಯವಸ್ಥೆಯ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಾಣವಾಗಿರುವುದು ವಾಸ್ತವವಾಗಿದೆ. ಖಾಸಗಿ ವ್ಯಕ್ತಿಗಳ ಹಿಡಿತದಲ್ಲಿ ಸಿಲುಕಿರುವ ಶಿಕ್ಷಣವು ವ್ಯಾಪಾರವಾಗಿದೆ. ಆದ್ದರಿಂದ ಶಿಕ್ಷಣ ಕ್ಷೇತ್ರದಲ್ಲಿರುವ ಮಿಶ್ರ ವ್ಯವಸ್ಥೆಯನ್ನು ಕೊನೆಗೊಳಿಸಲು ಹಾಗು ವಿದ್ಯಾಭ್ಯಾಸವನ್ನು ಖಾಸಗಿ ವ್ಯಕ್ತಿಗಳ ಹಿಡಿತದಿಂದ ಮುಕ್ತಗೊಳಿಸಲು ನಡೆಯುವ ಹೋರಾಟದಲ್ಲಿ ವಿದ್ಯಾರ್ಥಿಗಳು ಸಕ್ರೀಯ ಪಾತ್ರ ನಿರ್ವಹಿಸಬೇಕು" ಎಂದರು.

ಜನವಿರೋಧಿ ಶಿಕ್ಷಣ ಪದ್ಧತಿ

ಕಾಂ| ಥೋಮಸ್ ಐಸಕ್ ಸಮ್ಮೇಳನ ಉದ್ದೇಶಿಸಿ ಮಾತನಾಡುತ್ತಾ "ಜನವಿರೋಧಿ ಶಿಕ್ಷಣ ಪದ್ಧತಿಯೇ ಇಂದು ನಮ್ಮೆದುರಿರುವ ಸಮಸ್ಯೆ. ಏರುತ್ತಿರುವ ನಿರಕ್ಷರತಾ ಮಟ್ಟ, ಶಾಲಾ ಶಿಕ್ಷಣದಿಂದ ದೂರವಾಗುತ್ತಿರುವ ಮಕ್ಕಳು, ಯೋಜನೆಯಿಂದ ಯೋಜನೆಗೆ ಕಡಿತವಾಗುತ್ತಿರುವ ಶಿಕ್ಷಣವೆಚ್ಚ ಈ ಎಲ್ಲಾ ಬೆಳವಣಿಗೆಗಳು ನಮ್ಮ ಶಿಕ್ಷಣ ಪದ್ಧತಿಯು ಶ್ರೀಮಂತ ವರ್ಗದ ಗುತ್ತಿಗೆಯಾಗಿರುವುದನ್ನು ಸ್ಪಷ್ಟ ಪಡಿಸುತ್ತದೆ'' ಎಂದರು.

ಅವರು ಮುಂದುವರೆದು "ಇಂದಿನ ವಿದ್ಯಾಭ್ಯಾಸ ಈಗಿನ ಕಾಲಕ್ಕೂ, ಜೀವನದ ವಾಸ್ತವಕ್ಕೂ ಸಂಬಂಧ ಕಲ್ಪಿಸುವುದಿಲ್ಲ. ಕಲಿಯುವ ವಿಷಯಗಳು ವಿದ್ಯಾರ್ಥಿಗಳಿಂದಲೂ ಜನಸಮುದಾಯದಿಂದಲೂ ದೂರವಾಗಿದ್ದು ಸಾರ್ವತ್ರಿಕ ನಿರಸಿಕತನ (ಸಿನಿಸಿಸಮ್) ಬೆಳೆದು ಬರಲು ಕಾರಣವಾಗಿದೆ. ಇದು ಇಂದಿನ ಶಿಕ್ಷಣ ಪದ್ಧತಿಯ ವಾಸ್ತವ ಸ್ವರೂಪ. ಸಮಾಜವನ್ನು ಬಾಧಿಸುತ್ತಿರುವ ಸಮಸ್ಯೆಗಳು, ಅದರಿಂದ ಹುಟ್ಟಿರುವ ಅಸಮಾಧಾನ, ಶಿಕ್ಷಣ ರಂಗವನ್ನು ತಟ್ಟಿದ್ದು ಇದರಿಂದಾಗಿ ಹೋರಾಟ ಪ್ರಕ್ಷೋಭೆ ಬೆಳೆದು ಬರುತ್ತಿದೆ. ತನಗೆ ಬೇಕಾದ ವಿದ್ಯಾರ್ಥಿಗೆ ಎಂ.ಬಿ.ಬಿ.ಎಸ್ ನಲ್ಲಿ ಸೀಟು ಒದಗಿಸಿಕೊಡಲು ವಿವಿಧ ರೀತಿಯಲ್ಲಿ ಶ್ರಮಿಸಿದ ಕೇರಳ ವಿಶ್ವವಿದ್ಯಾಲಯದ ಓರ್ವ ಪಂಡಿತ ಮಹಾಶಯರು ವಿದಾರ್ಥಿ ಸಂಘಟನೆಗಳೇ ವಿದ್ಯಾಭ್ಯಾಸ ರಂಗದಕುಂದು ಕೊರತೆಗಳಿಗೆ ಕಾರಣವೆಂದು ಹೇಳಿದರು. ಆದರೆ ಇದು ಎಷ್ಟು ಸರಿ ? ಜನಸಮುದಾಯದ ಸಮಸ್ಯೆಗಳಿಂದ ಹೊರತು ಪಡಿಸಿ ಶೈಕ್ಷಣಿಕ ಕ್ಷೇತ್ರದ ಸಮಸ್ಯೆಗಳನ್ನು ಕಾಣಲು ಸಾಧ್ಯವಿಲ್ಲ. ಭೂ ಒಡೆತನ ಸಂಬಂಧದಲ್ಲಿ ಉಂಟಾಗುವ ಬದಲಾವಣೆ ಶಿಕ್ಷಣ ರಂಗದ ಮೇಲು ಪ್ರಭಾವ ಬೀರಬಲ್ಲದು.''

"ನಮ್ಮ ದೇಶದಲ್ಲಿ ಬಹುಪಾಲು ಜನರನ್ನು ಅವಿದ್ಯಾವಂತರನ್ನಾಗಿಯೇ ಇಡುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ. ಆದರೆ ಸಮಾಜವಾದಿ ವ್ಯವಸ್ಥೆಯಲ್ಲಿ ಹೀಗಾಗಲು ಸಾಧ್ಯವಿಲ್ಲ. ಅಲ್ಲಿ ಕಡ್ಡಾಯ ಶಿಕ್ಷಣ ಪದ್ಧತಿ ಜಾರಿಯಲ್ಲಿರುತ್ತದೆ. ಈಗಿರುವ ಶಿಕ್ಷಣ ಪದ್ಧತಿಗೆ ಬದಲಿಯಾಗಿ ಹೊಸ ವೈಜ್ಞಾನಿಕ ಪದ್ಧತಿಯ ಜಾರಿ ತರುವ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸುವ ಕೆಲಸವನ್ನು ಎಸ್. ಎಫ್. ಐ.ಯಂತಹ ಸಂಘಟನೆಗಳು ಮಾಡಬೇಕು."

"ವೃತ್ತಿ ಆಧಾರಿತ ಶಿಕ್ಷಣಪದ್ಧತಿಯ ಜಾರಿಯು ಭೂಮಾಲಿಕರ ಆಶಯಗಳಿಗೆ ವಿರುದ್ಧವಾದದ್ದು ಎಂತಲೇ ಅವರುಗಳು ಅದನ್ನು ಜಾರಿ ಮಾಡುತ್ತಿಲ್ಲ. ಆದರೆ ಯಾವತ್ತೂ ಶಿಕ್ಷಣವು ಇವರ ಗುತ್ತಿಗೆಯಾಗಿರಲು ಸಾಧ್ಯವಿಲ್ಲ."

"ವಿದ್ಯಾಭ್ಯಾಸದ ವಿಕೇಂದ್ರಿಕರಣಕ್ಕಾಗಿ ಇಂದು ನಾವು ಹೋರಾಟ ನಡೆಸಬೇಕಾಗಿದೆ. ಇಂದಿನ ಶಿಕ್ಷಣ ವ್ಯವಸ್ಥೆಯು ಅನಗತ್ಯವಾಗಿ ಕೇಂದ್ರೀಕೃತವಾಗಿದ್ದು ನಿರುಪಯೋಗಿಯಾಗಿದೆ. ಶಾಲಾ ಕಾಲೇಜುಗಳ ಎಫಿಲಿಯೇಶನ್ ವ್ಯವಸ್ಥೆ ಒಂದು ರೀತಿಯಲ್ಲಿ ವಿಕೇಂದ್ರಿಕರಣವೆಂದು ಕೆಲವರು ವಾದಿಸಬಹುದಾದರೂ ವಾಸ್ತವವಾಗಿ ಈ ಶಾಲಾ ಕಾಲೇಜುಗಳು ಕೇಂದ್ರಿಕೃತ ಪರೀಕ್ಷಾ ಪದ್ಧತಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ಕೇಂದ್ರಗಳಷ್ಟೇ ಆಗಿವೆ. ಇಂದಿನ ಕೇಂದ್ರಿಕೃತ ಪರಿಕ್ಷಾ ಪದ್ಧತಿಯ ಮೂಲಕ ವಿದ್ಯಾರ್ಥಿಗಳ ಬುದ್ಧಿ ಕೌಶಲ್ಯವನ್ನು ಅಳಿಯಲು ಸಾಧ್ಯವಿಲ್ಲ. ಏಕೀಕೃತ ಮನೋಭಾವ, ಗುಣಮಟ್ಟದ ಹೆಚ್ಚಿಸುವಿಕೆ ಶಿಕ್ಷಣದ ಕೇಂದ್ರಿಕರಣದಿಂದ ಮಾತ್ರ ಸಾಧ್ಯವೆನ್ನುವುದು ಸೂಕ್ತವಲ್ಲ. ಮುಂದಿನ ಕೋರ್ಸ್ಸಿಗೆ ಪ್ರವೇಶ ಪಡೆಯುವ ಪರೀಕ್ಷೆಯನ್ನಾಗಿಸಿಯಷ್ಟೇ ವಿದ್ಯಾಭ್ಯಾಸವನ್ನು ಕೇಂದ್ರಿಕರಣಗೊಳಿಸಲಾಗಿದೆ. ಗುಣಮಟ್ಟ ನೆಲೆ ನಿಲ್ಲಿಸಲು ಕೇಂದ್ರಿಕೃತ ವ್ಯವಸ್ಥೆ ಬೇಕೆನ್ನುವ ಮೂಲಕ ಕೇಂದ್ರಿಕರಣದ ಏಕಾಧಿಪತ್ಯ ನಡೆದಿದೆ. ಇದರಿಂದ ಕೃತ್ರಿಮವಾದ ಗುಣಮಟ್ಟದ ಸೃಷ್ಟಿ ಮಾತ್ರ ಸಾಧ್ಯ."

"ಶಿಕ್ಷಣ ಪದ್ಧತಿಯಲ್ಲೂ, ಪರೀಕ್ಷಾ ಪದ್ಧತಿಯಲ್ಲೂ ಮೌಲಿಕವಾದ ಬದಲಾವಣೆಯಾಗದೆ ಶಿಕ್ಷಣ ಸಮಸ್ಯೆಗಳು ಪರಿಹಾರವಾಗಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಇಂದಿನ ಅಗತ್ಯ ಪ್ರಜಾಪ್ರಭುತ್ವವಾದಿ ಶಿಕ್ಷಕರ ಹಾಗೂ ವಿದ್ಯಾರ್ಥಿ ಸಂಘಟನೆಗಳ ಬೆಳವಣಿಗೆ"

●

ಕುಮಾರ್ ಮತ್ತು ಅಪ್ಪು

(ಕೃಪೆ : ದೇಶಾಭಿಮಾನಿ)

ಅಂದು ಭರವಸೆ ಇಂದು ಬೆದರಿಕೆ

ರಾಯಚೂರು ಜಿಲ್ಲೆಯ ಗಂಗಾವತಿಯಲ್ಲಿ ಭೂಮಿಗೋಸ್ಕರ ಧೀರ್ಘ ಹೋರಾಟ ಮಾಡಿದ ದಲಿತರಿಗೆ ಜಿಲ್ಲಾಧಿಕಾರಿಗಳು ನ್ಯಾಯ ದೊರಕಿಸುವ ವಾಗ್ದಾನ ನೀಡಿದ್ದರು. (ಈ ಹೋರಾಟದ ಕುರಿತು ಐಕ್ಯರಂಗ ಈ ವಿವರ ಹಿಂದೆ ಪ್ರಕಟಿಸಿತ್ತು). ಯಾವದೇ ಫಲ ದೊರೆಯದ ಕಾರಣ ದಲಿತರು ಜಿಲ್ಲಾಧಿಕಾರಿಗೆ ಈ ಕುರಿತು ಒತ್ತಾಯಿಸಿದಾಗ ಎಲ್ಲರನ್ನೂ ಸೆರೆಮನೆಗೆ ತಳ್ಳುವೆನೆಂದು ಬೆದರಿಸಿರುವುದಾಗಿ ವರದಿಯಾಗಿದೆ.

1972ರಲ್ಲಿ ಸರ್ವೆ ಆದ ಭೂಮಿ ಮತ್ತು ಗ್ರ್ಯಾಂಟ್ ಆದ ಭೂಮಿ ಯಾವ ಲೆಕ್ಕಕ್ಕೂ ಇಲ್ಲ. ಸಾಕಷ್ಟು ದಲಿತರಿಗೆ ಕಾಗದ ಪತ್ರಗಳ ಮೇಲೆ ಸಿಕ್ಕಿದೆಯೇ ಹೊರತು ಇಲ್ಲಿಯವರೆಗೆ ಅವರು ಭೂಮಿಯುನ್ನು ನೋಡಿಲ್ಲ. ಗ್ರ್ಯಾಂಟ್ ಪಡೆದವರೇ ಬೇರೆ; ಭೂಮಿ ಉಳುವವರೇ ಬೇರೆ ಅಲ್ಲದೆ ಈಗ ಗ್ರ್ಯಾಂಟ್ ಕಮಿಟಿಯನ್ನು ಈಗ ಪುನಃ ರಚನೆಮಾಡಲಾಗಿದೆ

ಈ ಹಿಂದೆ ಗ್ರ್ಯಾಂಟ್ ಆಗಿದ್ದ ಭೂಮಿಯನ್ನು ಕಬ್ಜಾ ಮಾಡಿಕೊಡುವುದು ಮತ್ತು 1972ರ ಸರ್ವೆ ಮಾಡಿದ ಪ್ರಕಾರ ಉಳಿದ ಭೂಮಿಯನ್ನು ಗ್ರ್ಯಾಂಟ್ ಮಾಡಿಕೊಡಬೇಕೆಂದು ದಲಿತ ಸಂಘರ್ಷ ಸಮಿತಿಯ ತಾಲೂಕು ಘಟಕ ಒತ್ತಾಯಿಸಿದೆ.

ಜಿಲ್ಲಾಧಿಕಾರಿಗಳ ಬೆದರಿಕೆಗೆ ಜಗ್ಗದೆ ಹೋರಾಟ ಮುಂದುವರಿಸಬೇಕೆಂದು ದ.ಸಂ.ಸ.ನ ಗಂಗಾವತಿ ಶಾಖೆಯ ಸಂಚಾಲಕ ಕಾಂ| ಭಾಗ್ಯವಂತ ಒತ್ತಾಯಿಸಿದ್ದಾರೆ.

ಪಕ್ಷದ ಹಿತೈಷಿಗಳ ಸಭೆ

ಪುತ್ತೂರು ತಾಲ್ಲೂಕಿನ ಪಾಣಾಜೆಯಲ್ಲಿ 7-2-82 ರಂದು ಮಾರ್ಕ್ಸ್‌ವಾದಿಗಳ ಕಮ್ಯುನಿಸ್ಟ್ ಪಕ್ಷದ ಹಿತೈಷಿಗಳ ಸಭೆ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಕಾಂ| ಕುಂಞ ಅಹ್ಮದ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಾಂ| ಬಿ. ರಾಮಕೃಷ್ಣ ಆಗಮಿಸಿದ್ದರು.

ಕಾಂ| ರಾಮಕೃಷ್ಣ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ದೇಶದಲ್ಲಿ ಬೆಳೆಯುತ್ತಿರುವ ಸರ್ವಾಧಿಕಾರದ ಅಪಾಯದ ಕುರಿತು ಸಭಿಕರ ಗಮನ ಸೆಳೆದರು. ಕೇರಳದ ವಿದ್ಯಾಮಾನಗಳನ್ನು ವಿಶ್ಲೇಷಿಸುತ್ತಾ, ಕಾಂಗ್ರೆ ಸರ್ಕಾರವು ಅಲ್ಪಸಂಖ್ಯಾತ ಬಹುಮತದ ಪಕ್ಷವಾದರೂ ಅಧಿಕಾರಕ್ಕೆ ಅಂಟಿ ಕುಳಿತಿರುವುದನ್ನು ಕಾಂ| ರಾಮಕೃಷ್ಣ ಖಂಡಿಸಿದರು.

ದೇಶಕ್ಕೆ ಪರ್ಯಾಯ ವ್ಯವಸ್ಥೆ ಒದಗಿಸಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಮಾತ್ರ ಸಾಧ್ಯ ಎಂದ ಕಾಂ| ರಾಮಕೃಷ್ಣ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷವನ್ನು ಬಲಪಡಿಸಲು ಕರೆ ನೀಡಿದರು. ಕೊನೆಯಲ್ಲಿ ಕಾಂ| ಕೃಷ್ಣ ಭಂಡಾರಿ ವಂದಿಸಿದರು.

ದೆಹಲಿ ಪ್ರದೇಶ ಕಾರ್ಯದರ್ಶಿಯಾಗಿ ಕಾಂ| ಪ್ರಕಾಶ್ ಕಾರಟ್

ಕಾಂ| ಜೈಪಾಲ್‌ಸಿಂಗ್‌ರ ಆಕಸ್ಮಿಕ ನಿಧನದಿಂದ ತೆರುವಾದ ದೆಹಲಿ ಪ್ರದೇಶ ಸಮಿತಿಯ ಕಾರ್ಯದರ್ಶಿ ಸ್ಥಾನಕ್ಕೆ ಕಾಂ| ಪ್ರಕಾಶ್ ಕಾರಟ್ ಆಯ್ಕೆಯಾಗಿದ್ದಾರೆ. ಎಸ್.ಎಫ್.ಐ ನ ಮಾಜೀ ಅಧ್ಯಕ್ಷರಾಗಿದ್ದ ಕಾಂ| ಪ್ರಕಾಶ್ ಕಳೆದ ನಾಲ್ಕು ವರ್ಷಗಳಿಂದ ದೆಹಲಿ ಪ್ರದೇಶ ಸಮಿತಿಯ ಸದಸ್ಯರಾಗಿದ್ದರು.

ಕಾಂ| ಪ್ರಕಾಶ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿಗಳಲ್ಲಿ ಅತಿ ಕಡಿಮೆ ವಯಸ್ಸಿನವರು.

ಚಂದ ವಿವರ

ಬಿಡಿ ಪ್ರತಿ	: 60 ಪೈಸೆ
6 ತಿಂಗಳಿಗೆ	: 15 ರೂ.
ವಾರ್ಷಿಕ ಚಂದಾ	: 30 ರೂ.

ಪ್ರಾದೇಶಿಕ ಮಟ್ಟದ ಕೃಷಿ ಕೂಲಿಕಾರರ ಸಮ್ಮೇಳನ

ಬೆಂಗಳೂರು, ತುಮಕೂರು, ಕೋಲಾರ ಮತ್ತು ಮಂಡ್ಯ ಜಿಲ್ಲೆಗಳನ್ನೊಳಗೊಂಡಂತೆ ಪ್ರಾದೇಶಕ ಮಟ್ಟದ ಕೃಷಿ ಕೂಲಿಕಾರರ ಸಮ್ಮೇಳನವು ಬೆಂಗಳೂರು ದಕ್ಷಿಣ ತಾಲ್ಲೂಕಿನ ವಸಂತಪುರದಲ್ಲಿ ಫೆಬ್ರವರಿ 13 ಮತ್ತು 14 ರಂದು ನಡೆಯಿತು.

ಫೆಬ್ರವರಿ 13ರ ಮಧ್ಯಾಹ್ನ ಪ್ರಾರಂಭವಾದ ಸಮ್ಮೇಳನದಲ್ಲಿ 150 ಪ್ರತಿನಿಧಿಗಳು ಭಾಗವಹಿಸಿದ್ದರು. ಆರಂಭದಲ್ಲಿ ಸ್ವಾಗತ ಸಮಿತಿಯ ಕಾರ್ಯದರ್ಶಿ ಕಾಂ॥ ಪಿ. ಜಗನ್ನಾಥರು ಪ್ರತಿನಿಧಿಗಳನ್ನು ಸ್ವಾಗತಿಸಿ ಸಮ್ಮೇಳನದ ಉದ್ದೇಶವನ್ನು ವಿವರಿಸಿದರು.

ಸಮ್ಮೇಳನವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಕಾಂ। ಎಚ್. ಮುಗುಮಳಪ್ಪನವರು ಸಮ್ಮೇಳನವನ್ನು ಉದ್ಘಾಟಿಸಿದರು. ಕಾ। ಮುಗುಮಳಪ್ಪ ಮಾತನಾಡುತ್ತಾ ಎ.ಐ.ಕೆ.ಎಸ್. ನೇತೃತ್ವದಲ್ಲಿ ದೇಶಾದ್ಯಂತ ರೈತರು ನಡೆಸಿದ ಹೋರಾಟಗಳನ್ನು ವಿವರಿಸಿದರು. ಕೃಷಿ ಕಾರ್ಮಿಕರು ಪ್ರತ್ಯೇಕಸಂಘಟನೆಯನ್ನು ಕಟ್ಟುವ ಉದ್ದೇಶವನ್ನು ವಿವರಿಸಿದರು.

ಸಮ್ಮೇಳನದ ಕಲಾಪಗಳನ್ನು ನಿರ್ವಹಿಸಲು ಕಾಂ।ಪಾಪಣ್ಣ, ಎಸ್. ಲಕ್ಷ್ಮಯ್ಯ ಮತ್ತು ಎಚ್. ಸಿ. ಚನ್ನಪ್ಪ ಇವರನ್ನೊಳಗೊಂಡ ಅಧ್ಯಕ್ಷ ಮಂಡಳಿಯನ್ನು ರಚಿಸಲಾಯಿತು. ಆರಂಭದಲ್ಲಿ ಇತ್ತೀಚಿಗೆ ನಿಧನರಾದ ಕಾ॥ ಬಾಲಸುಬ್ರಮಣ್ಯಂ, ಜ್ಯೋತಿರ್ಮಯಿ ಬಸು ಮತ್ತು ಕಾ॥ ಜೈಪಾಲ್‌ಸಿಂಗ್‌ರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸಮ್ಮೇಳನಕ್ಕೆ ಆಗಮಿಸಿದ್ದ ಪ್ರತಿನಿಧಿಗಳಲ್ಲಿ 21 ಪ್ರತಿನಿಧಿಗಳು ತಮ್ಮ ತಮ್ಮ ಪ್ರದೇಶದ ಕೃಷಿ ಕೂಲಿಕಾರರ ಸಮಸ್ಯೆಗಳನ್ನು ಕುರಿತು ಮಾತನಾಡಿದರು.

ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ। ಪಿ. ರಾಮಚಂದ್ರ ರಾವ್ ಅವರು ಮಾತನಾಡುತ್ತಾ ಕೃಷಿ ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಂಘಟಿತ ಹೋರಾಟ ನಡೆಸಬೇಕೆಂದು ಕರೆಕೊಟ್ಟರು.

ಸಮ್ಮೇಳನದ ಅಂಗವಾಗಿ 14-2-82 ರಂದು ಸಾಯಂಕಾಲ ವಸಂತಪುರದಿಂದ ರೈತ ಕೂಲಿಕಾರ ಬೃಹತ್ ಮೆರವಣಿಗೆ ನಡೆಯಿತು. ಕೊನೆಯಲ್ಲಿ ಮೆರವಣಿಗೆ ಸಮಾವೇಶಗೊಂಡ ಉತ್ತರಹಳ್ಳಿಯಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಕಾ। ಎಸ್. ಸೂರ್ಯ ನಾರಾಯಣರಾವ್, ಪಿ. ರಾಮಚಂದ್ರರಾವ್, ವ್ಹಿ. ಎನ್. ಹಳಕಟ್ಟಿ, ಭೀಮಸೀ ಕಲಾದಗಿ, ಪಿ. ಜಗನ್ನಾಥ ಮೊದಲಾದವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ। ಮುಗುವಾಳಪ್ಪ ವಹಿಸಿದ್ದರು.

ಸಂಘಟನೆಯ ಕಾರ್ಯ ನಿರ್ವಹಿಸಲು ಸಧ್ಯಕ್ಕೆ ತಾತ್ಕಾಲಿಕ ಸಮಿತಿಯೊಂದನ್ನು ರಚಿಸಲಾಗಿದೆ.

ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳು

1) ಕೃಷಿ ಕೂಲಿಕಾರರಿಗೆ ಕನಿಷ್ಠ ಕೂಲಿ 10 ರೂ. ಕೂಲಿ ನಿಗದಿಪಡಿಸಬೇಕು.

2) ದಲಿತರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಿ ದಲಿತರಿಗೆ ರಕ್ಷಣೆ ಕೊಡಬೇಕು.

3) ಕೃಷಿ ಕಾರ್ಮಿಕರಿಗೆ ವೃದ್ಧಾಪ್ಯ (ವಯಸ್ಸಾದವರಿಗೆ) ವೇತನ ಕೊಡಬೇಕು.

4) ತಾತಗುಣಿ ಎಸ್ಟೇಟ್‌ನ 64 ಜನರ ಮೇಲೆ ಪೋಲಿಸ್‌ಕೇಸ್‌ಗಳಿದ್ದು ಇವರಲ್ಲಿ 34 ಜನ ಮಹಿಳೆಯರಿದ್ದಾರೆ. ಅವರೆಲ್ಲರ ಮೇಲೆ ಕೇಸ್‌ಗಳನ್ನು ಕೂಡಲೇ ವಾಪಸ್ ಪಡೆಯಬೇಕು...... ಇತ್ಯಾದಿ.

ಆರಂಭದ ದಿನ ಸಮ್ಮೇಳನಕ್ಕೆ ಸಿ.ಐಟಿಯು ರಾಜ್ಯಸಮಿತಿ ಅಧ್ಯಕ್ಷ ಕಾಂ। ಸೂರ್ಯನಾರಾಯಣರಾವ್, ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಕಾಂ। ಎಸ್. ಶಿವರಾಂ, ಕೋಲಾರ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ। ಲಕ್ಷ್ಮಣರೆಡ್ಡಿ, ಬೆಂಗಳೂರು ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಕಾಂ। ಗಂಗಯ್ಯ ಮತ್ತು ಸಿ.ಬಿ.ಎಸ್.ಯುನ ಕಾಂ। ರೇವಣ್ಣ ಶುಭಕೋರಿದರು.

———

ದುಡಿಯುವ ವರ್ಗದ ಮೇಲೆ ಮತ್ತೊಂದು ಪ್ರಹಾರ

ಕೇಂದ್ರ ಸರಕಾರವು ಪ್ರಕಟನೆಯೊಂದನ್ನು ಹೊರಡಿಸಿ ಹದಿನಾರು ಕೈಗಾರಿಕೆಗಳನ್ನು ಅಗತ್ಯ ಸೇವೆಗಳಡಿಯಲ್ಲಿ ತಂದಿದೆ ಇವುಗಳಿಗೆ ಸಂಬಂಧಿಸಿದ ಇತರ ಎಲ್ಲಾ ಕೈಗಾರಿಕೆಗಳಿಗೂ ಈ ಕಾಯ್ದೆಯನ್ನು ಅನ್ವಯಿಸುವ ಸಾಧ್ಯತೆಯನ್ನು ಈ ಪ್ರಕಟನೆಯಲ್ಲಿ ಇರಿಸಿಕೊಂಡಿದೆ. 'ಕೇಂದ್ರದ ಈ ಪ್ರಕಟನೆಯು ದುಡಿಯುವ ವರ್ಗದ ಮೇಲೆ ಮತ್ತೊಂದು ಪ್ರಹಾರವೆಸಗಿದಂತಾಗಿದೆ' ಎಂದು ಕಾಂ। ಸೂರ್ಯನಾರಾಯಣರಾವ್ ಎಂದಿದ್ದಾರೆ. 9-2-82 ರಂದು ಕಾಂ। ಸೂರಿಯವರು ಈಕುರಿತು ಪತ್ರಿಕಾ ಪ್ರಕಟನೆ ನೀಡಿದ್ದಾರೆ. ಸಾರಾಶ ಇಂತಿದೆ:

"ಈ ಪ್ರಕಟನೆಯು ಸಾಮೂಹಿಕ ಚೌಕಾಸಿಯನ್ನು ನಿಷೇಧ ಮಾಡಿದೆ, ಮುಷ್ಕರದ ಹಕ್ಕನ್ನು ಕಸಿದುಕೊಂಡು ಕಾರ್ಮಿಕ ವರ್ಗದ ಜೀವನಮಟ್ಟದ ಮೇಲೆ ದಾಳಿ ನಡೆಸಿದೆ. ಸಿಐಟಿಯು ರಾಜ್ಯ ಕಮಿಟಿಯು ಈ ಅಧಿಕಾರಶಾಹಿ ಧೋರಣೆಯನ್ನು ಖಂಡಿಸುತ್ತದೆ."

"ರಾಷ್ಟ್ರೀಯ ಭದ್ರತಾ ಶಾಸನವನ್ನು ಕಾರ್ಮಿಕ ವರ್ಗದ ವಿರುದ್ಧ ಪ್ರಯೋಗಿಸುವದಿಲ್ಲವೆಂಬ ಸರಕಾರೀ ವಕ್ತಾರರ ಹೇಳಿಕೆಯು ಎಷ್ಟು ಪೊಳ್ಳು ಎಂಬುದನ್ನು ಈ ಪ್ರಕಟನೆ ತೋರಿಸಿದೆ. ಜ. 19ರ ಮಹಾ ಮುಷ್ಕರದ ನಂತರ ಹೊರಬಿದ್ದ ಈ ಪ್ರಕಟನೆಯು ಕಾರ್ಮಿಕ ವರ್ಗದ ಸಂಶಯವನ್ನು ಧೃಢ ಪಡಿಸಿದೆ."

ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳೂ, ರಾಜ್ಯದ ಕಾರ್ಮಿಕ ವರ್ಗವೂ ಐಕ್ಯವಾಗಿ ಈ ದುಷ್ಟ ಪ್ರಕಟನೆಯನ್ನು ವಿರೋಧಿಸಬೇಕು ಮತ್ತು ಇದನ್ನು ಹಿಂತೆಗೆದುಕೊಳ್ಳಬೇಕೆಂಬ ಬೇಡಿಕೆಗಾಗಿ ಕೇಂದ್ರದ ವಿರುದ್ಧ ಶಕ್ತಿಯುತ ಚಳುವಳಿಗೆ ಮುಂದಾಗಬೇಕೆಂದು ಸಿಐಟಿಯು ಮನವಿ ಮಾಡುತ್ತದೆ" ಎಂದು ಸೂರ್ಯನಾರಾಯಣರಾವ್ ತಿಳಿಸಿದ್ದಾರೆ.

ಕೇಂದ್ರ ಸರಕಾರದ ಈ ಪ್ರಕಟನೆಯನ್ನು ಉಗ್ರವಾಗಿ ಖಂಡಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ। ವಿ. ಜೆ. ಕೆ. ನಾಯರ್ ಪತ್ರಿಕಾ ಹೇಳಿಕೆಯೊಂದನ್ನು ನೀಡಿದ್ದಾರೆ.

———

ಕನಿಷ್ಠ ಕೂಲಿ ಜಾರಿಗೆ ಒತ್ತಾಯಿಸಿ

ಹೋಟೇಲ್ ಕಾರ್ಮಿಕರ ಮೆರವಣಿಗೆ

ಕನಿಷ್ಠ ಕೂಲಿ ಸಲಹಾ ಸಮಿತಿಯ ಸಭೆಯಲ್ಲಿ ಒಪ್ಪಿಕೊಂಡ ರೀತ್ಯ ಕನಿಷ್ಠ ಕೂಲಿಯನ್ನು ಜಾರಿಗೆಗೊಳಿಸಬೇಕೆಂದು ಒತ್ತಾಯಿಸಿ 15-2-82 ರಂದು ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರು ವಿಧಾನ ಸೌಧದ ವರೆಗೆ ಮೆರವಣಿಗೆ ಹೊರಡಿಸಿ ಕಾರ್ಮಿಕ ಮಂತ್ರಿಗೆ ಮನವಿ ಸಲ್ಲಿಸಿದರು.

ಬೆಂಗಳೂರು ನಗರದಲ್ಲಿಯೇ ಸುಮಾರು 25,000ಕ್ಕೂ ಮೇಲ್ಪಟ್ಟು ಕಾರ್ಮಿಕರು ಹೋಟೆಲ್ ಉದ್ಯಮದಲ್ಲಿ ಕೆಲಸ ಮಾಡುತ್ತಿರುವರು. ಈ ಕಾರ್ಮಿಕರಿಗೆ ದಿನಕ್ಕೆ 8 ಗಂಟೆ ಕೆಲಸ, ವಾರದ ಹಾಗೂ ಹಬ್ಬದ ರಜಾ ದಿನ, ಪ್ರಾವಿಡೆಂಟ್‌ಫಂಡ್, ಇ.ಎಸ್.ಐ ಈಯಾವ ಸೌಲಭ್ಯಗಳೂ ದೊರೆಯುತ್ತಿಲ್ಲ. ಶೇ. 99 ರಷ್ಟು ಕಾರ್ಮಿಕರಿದ್ದೂ ಇದೇ ಪಾಡು. ಎಷ್ಟೇ ವರ್ಷ ಹೋಟೆಲ್‌ಗಳಲ್ಲಿ ದುಡಿಯುತ್ತ ಬಂದರೂ ಕೆಲಸದ ಭದ್ರತೆ ಇಲ್ಲ.

ಈ ಕಾರ್ಮಿಕರಿಗೆ ಸಂಬಂಧಿಸಿ ಕನಿಷ್ಠ ಕೂಲಿಯ ಕುರಿತು ಅಂತಿಮ ಪ್ರಕಟನೆಯನ್ನು ಸರಕಾರ ಹೊರಡಿಸಿಲ್ಲ.

ಹೋಟೆಲ್ ಕಾರ್ಮಿಕರು ಈ ವಿಳಂಬ ನೀತಿಯನ್ನು ಪ್ರತಿಭಟಿಸಿ ಮೆರವಣಿಗೆಯನ್ನು ಏರ್ಪಡಿಸಿದ್ದರು. ಮೆರವಣಿಗೆಯಲ್ಲಿ ಸುಮಾರು 500 ಕಾರ್ಮಿಕರು ಪಾಲ್ಗೊಂಡಿದ್ದರು.

ಕಾಂ। ಇ. ಕೆ. ಎನ್. ರಾಜನ್, ಎ. ಆರ್. ಅಡವೀಶ್, ಪಿ. ಕೆ. ಸುಬ್ರಮಣಿ ಮತ್ತು ಕಾಂ। ಲಕ್ಕಣ್ಣ ಇವರನ್ನೊಳಗೊಂಡ ನಿಯೋಗವೊಂದು ಕಾರ್ಮಿಕ ಮಂತ್ರಿಗೆ ಭೇಟಿಯಾಗಿ ಮನವಿ ಸಲ್ಲಿಸಿತು.

ಈ ತಿಂಗಳ ಕೊನೆಯ ಒಳಗಾಗಿ ಕನಿಷ್ಠ ಕೂಲಿಗೆ ಸಂಬಂಧಿಸಿ ಅಂತಿಮ ಪ್ರಕಟನೆ ಹೊರಡಿಸಲಾಗುವದೆಂದೂ, ಕಾರ್ಮಿಕ ಕಾನೂನುಗಳನ್ನು ಅನುಷ್ಠಾನಕ್ಕೆ ತರುವಂತೆ ಕಾರ್ಮಿಕ ಇಲಾಖೆಗೆ ಸೂಕ್ತ ಆದೇಶ ನೀಡಲಾಗುವದೆಂದೂ ಕಾರ್ಮಿಕ ಮಂತ್ರಿ ಜಕನೂರ್ ಅವರು ಭರವಸೆ ನೀಡಿದ್ದಾರೆ.

———

ಪೋಲೀಸ್ ದೌರ್ಜನ್ಯ ಪ್ರತಿಭಟಿಸಿ ಮತಪ್ರದರ್ಶನ

ನಗರದಲ್ಲಿ ಆಟೋ ಚಾಲಕರ ಮೇಲೆ ಪೋಲಿಸರು ನಡೆಸುವ ಕಿರುಕುಳ ಪ್ರತಿಭಟಿಸಿ 13-2-82 ರಂದು ಬೆಂಗಳೂರಿನ ಕೆಂಗೇರಿಗೇಟ್ ಪೋಲಿಸ್ ಸ್ಟೇಷನ್ ಎದುರು ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ (ARDU)ನ ನೇತೃತ್ವದಲ್ಲಿ ಮತಪ್ರದರ್ಶನ ನಡೆಸಲಾಯಿತು.

ರೈಲು ನಿಲ್ದಾಣ ಮುಂಭಾಗದ ರಸ್ತೆಯಲ್ಲಿ ಪ್ರಯಾಣಿಕರನ್ನೂ ಇಳಿಸಿ ಹಣ ಪಡೆಯುವ ಸಮಯದಲ್ಲಿ ಮೊಕದ್ದಮೆ ಹಾಕುವುದನ್ನು ನಿಲ್ಲಿಸಬೇಕು. ಆಟೋದಲ್ಲಿ ಪ್ರಯಾಣಿಕರು ಸಂಚರಿಸುವಾಗ (ಆರ್‌ಟಿಓ ನವರು ದಾಖಲೆ ಪತ್ರ ಪಡೆದಿದ್ದಕ್ಕೆ ಚೀಟಿ ಕೊಟ್ಟಿದ್ದನ್ನು ತೋರಿಸಿದರೂ) ದಾಖಲೆ ಪತ್ರ ಇಲ್ಲವೆಂದು ಮೊಕದ್ದಮೆ ಹಾಕುವುದನ್ನು ಕೈಬಿಡಬೇಕು ಈ ಮುಂತಾದ ಕಿರುಕುಳದ ವಿರುದ್ಧ ಆಟೋ ಚಾಲಕರು ಮತಪ್ರದರ್ಶನ ನಡೆಸಿದರು.

ಚಾಲಕರ ತೊಂದರೆಗಳಿಗೆ ಕಿವಿಗೊಡುವ ಬದಲು ಕೆಂಗೇರಿಗೇಟ್ ಸಬ್ ಇನ್‌ಸ್ಪೆಕ್ಟರವರು ಮತ ಪ್ರದರ್ಶಕರ ಮೇಲೆ ಹಲ್ಲೆ ಮಾಡಿದ್ದಾರೆ, ಘೋಷಣೆಗಳನ್ನು ಕೂಗದಂತೆ ಒತ್ತಾಯಿಸಿದ್ದಾರೆ ಆಟೋರಿಕ್ಷಾ ಸಂಘದ ಪ್ರಧಾನಕಾರ್ಯದರ್ಶಿ ಕಾ॥ ಎ ವಿ. ರಮೇಶರು ಸಬ್ ಇನಸ್ಪೆಕ್ಟರ ಅಮಾನವೀಯ ನಡತೆಯನ್ನು ಕುರಿತು ಪ್ರತಿಭಟಿಸಿದಾಗ ಅವರನ್ನು ಠಾಣೆಯೊಳಗೆ ಎಳೆದೊಯ್ದು ಥಳಿಸಿದ್ದಾರೆ. ಅದೂ ಅಲ್ಲದೇ ಹತ್ತು ಜನರನ್ನು ಅಕ್ರಮವಾಗಿ ಬಂಧಿಸಿ ನಂತರ ಬಿಡುಗಡೆಮಾಡಲಾಗಿದೆ,

ಸಬ್‌ಇನಸ್ಪೆಕ್ಟರನ ಈ ಅಸಭ್ಯ ನಡುವಳಿಕೆಯನ್ನು ಆಟೋರಿಕ್ಷಾ ಡ್ರೈವರ್ಸ್‌ಯೂನಿಯನ್ ತೀವ್ರವಾಗಿ ಖಂಡಿಸಿದೆ.

———

ಬಹಿರಂಗ ಸಭೆ

1982 ಫೆಬ್ರವರಿ 6 ಮತ್ತು 7 ರಂದು ಬೆಂಗಳೂರಿನಲ್ಲಿ ಡಿವೈಎಫ್‌ಐ. ರಾಜ್ಯ ಸಮಿತಿಯ ಸಭೆ ನಡೆಯಿತು. ಸಭೆಯ ಅಂಗವಾಗಿ ಫೆಬ್ರವರಿ 7 ರಂದು ಬೆಂಗಳೂರಿನ ರಾಮಮೂರ್ತಿ ನಗರದಲ್ಲಿ ಬೆಂಗಳೂರು ಜಿಲ್ಲಾ ಡಿವೈ.ಎಫ್‌ಐ. ಆಶ್ರಯದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿಯ ಉಪಾಧ್ಯಕ್ಷ ಕಾಂ।ಕೃಷ್ಣಮೂರ್ತಿವಹಿಸಿದ್ದರು. ಸಭೆಯನ್ನುದ್ದೇಶಿಸಿ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ।ಶ್ರೀರಾಂ ರೆಡ್ಡಿ ಮತ್ತು ಕಾರ್ಯಸಮಿತಿ ಸದಸ್ಯ ಕಾಂ। ಮೋಹನ್ ಕುಮಾರ್ ಮಾತನಾಡಿದರು. ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ। ಶಿವರಾಂ ಮಾತನಾಡುತ್ತಾ, ಬೆಂಗಳೂರಿನ ಕೃಷ್ಣರಾಜಪುರ ವೈಟ್‌ಫೀಲ್ಡ್ ವಿಭಾಗಗಳಲ್ಲಿ ಬೆಳೆಯುತ್ತಿರುವ ಕೈಗಾರಿಕೆಗಳಲ್ಲಿ ಸ್ಥಳೀಯ ಯುವಕರಿಗೆ ಪ್ರಾಧಾನ್ಯ ಕೊಡಬೇಕೆಂದು ಒತ್ತಾಯಿಸಿದರು.

ಆರಂಭದಲ್ಲಿ ಕಾಂ। ಜಯಶೇಖರ್ ಸ್ವಾಗತಿಸಿದರು. ಕೊನೆಯಲ್ಲಿ ಸ್ಥಳೀಯ ಡಿವೈಎಫ್‌ಇ. ಕಾರ್ಯಕರ್ತ ಮುರಳೀಧರ ನಾಯ್ಡು ವಂದಿಸಿದರು.

ಪಕ್ಷ ಸಂಯುಕ್ತರಂಗ ಹಾಗೂ ಜನತೆ

(ಹಿಂದಿನ ಸಂಚಿಕೆಯಿಂದ)

ಪಂಥವಾದೀ ದೃಷ್ಟಿಯಲ್ಲ

ಈ ಸಂಯುಕ್ತ ಆಂದೋಲನಗಳಲ್ಲಿ ಯಾರು ನಮ್ಮ ಭಾಗೀದಾರರಾಗಬೇಕೆಂಬ ಬಗ್ಗೆ ನಾವು ಎಂದೂ ಪಂಥವಾದೀ ದೃಷ್ಟಿಯಿಂದ ಯೋಚಿಸಲಿಲ್ಲ. ಯಾವುದೇ ನಿರ್ದಿಷ್ಟ ಪ್ರಶ್ನೆಯನ್ನು ಕುರಿತಂತೆ ಯಾರಾರು ನಮ್ಮೊಡನೆ ಸಹಮತಿ ಹೊಂದಿದ್ದರೋ, ಅವರಲ್ಲಿ ಬೇರೆ ಪ್ರಶ್ನೆಗಳ ಬಗ್ಗೆ ನಮ್ಮಿಂದ ಭಿನ್ನವಾದ ನಿಲುವು ಹೊಂದಿದ್ದರೂ ಕೂಡಾ ನಮ್ಮ ಜತೆ ಬಂದರು. ಡಾ. ಸುರೇಶ ಬ್ಯಾನರ್ಜಿ ಕಾಂಗ್ರೆಸ್ ತ್ಯಜಿಸಿ ಕೃಪಲಾನಿಯವರ ನೇತೃತ್ವದ ಕೃಷಕ ಮಜದೂರ್ ಪಾರ್ಟಿ ಸೇರಿದಾಗ ಅವರನ್ನು ನಾವು 1952ರ ಬರಗಾಲ ಸ್ಥಿತಿ ವಿರೋಧೀ ಸಂಯುಕ್ತ ಆಂದೋಲನದ ನಾಯಕರನ್ನಾಗಿ ಸ್ವೀಕರಿಸಿದೆವು.

ಜೈಲಿನಿಂದ ಹೊರ ಬಂದ ಶರತ್ ಚಂದ್ರ ಬೋಸ್, (ನೇತಾಜಿ ಸುಭಾಸ್ ಚಂದ್ರ ಬೋಸರ ಸಹೋದರ) ನಮ್ಮ ಬಗ್ಗೆ ಟೀಕೆ ಮಾಡುತ್ತಿದ್ದರು. ಆದರೆ ನಂತರ ಅವರು ನಾಗರಿಕ ಸ್ವಾತಂತ್ರ್ಯಗಳಿಗಾಗಿ ನಮ್ಮೊಡನೆ ದುಡಿದರು ಹಾಗೂ ಕಾಂಗ್ರೆಸ್ ಸರಕಾರದ ವಿರುದ್ಧ ನಮಗೆ ದೃಢ ಬೆಂಬಲ ನೀಡಿದರು.

ನಂತರದ ವರ್ಷಗಳ ಹಲವು ಆಂದೋಲನಗಳಲ್ಲಿ ಅವುಗಳ ಸಂಘಟನೆಯ ಪ್ರಮುಖ ಜವಾಬ್ದಾರಿ ನಮ್ಮ ಹೆಗಲ ಮೇಲೆ ಬಿದ್ದರೂ ನಾವು ಇತರ ಪಕ್ಷಗಳ ನಾಯಕರನ್ನು ಅಧ್ಯಕ್ಷರನ್ನಾಗಿ ಅಥವಾ ಸಂಯೋಜಕರನ್ನಾಗಿ ಸ್ವೀಕರಿಸಿದೆವು. ಸಾಮೂಹಿಕ ಸಂಘಟನೆ ನಡೆಸುವುದರಲ್ಲಿ ನಾವು ತಪ್ಪು ಮಾಡಲಿಲ್ಲವೆಂದೇನಲ್ಲ. ಆದರೆ ಅದನ್ನು ನಾವು ಅವಶ್ಯವಾಗಿ ತಿದ್ದಿಕೊಂಡೆವು.

ಎಂದೂ ನಾವು ಇತರರ ಮೇಲೆ ನಮ್ಮನ್ನು ನಾಯಕರಾಗಿ ಹೇರಲಿಲ್ಲ. ಬದಲಾಗಿ ಎಷ್ಟು ಸಾಧ್ಯವೋ ಅಷ್ಟು ಪಕ್ಷಗಳೊಂದಿಗೆ ಸೇರಿ ದುಡಿದೆವು. ಈ ಸಂಯುಕ್ತ ರಂಗಗಳಲ್ಲಿ ಫಾರ್ವರ್ಡ್ ಬ್ಲಾಕ್, ಆರ್.ಎಸ್.ಪಿ. ಅಥವಾ ಆರ್ ಸಿ.ಪಿ.ಐ. ನಂತರ ಎಡಪಂಥೀಯ ಪಕ್ಷಗಳೂ ಇದ್ದವು, ಪ್ರಜಾ ಸಮಾಜವಾದೀ ಪಕ್ಷ ಅಥವಾ ಬಾಂಗ್ಲಾ ಕಾಂಗ್ರೆಸ್ ನಂತಹ ಎಡಪಂಥೀಯವಲ್ಲದ ಪಕ್ಷಗಳೂ ಇದ್ದವು. ನಮ್ಮ ಮುಖ್ಯ ಉದ್ದೇಶವಿದ್ದದ್ದು ಸಾಧ್ಯವಿದ್ದಷ್ಟು ಹೆಚ್ಚು ಜನರನ್ನು, ಹಾಗೂ ವಿರೋಧೀ ಪಕ್ಷಗಳನ್ನು ಒಗ್ಗೂಡಿಸಬೇಕೆಂದು.

ಪ್ರತಿಯೊಂದು ಪಕ್ಷವೂ ಪ್ರತಿಯೊಂದು ಆಂದೋಲನದಲ್ಲಿ ನಮ್ಮೊಡನೆಯಿರಲಿಲ್ಲ. 1956 ರಲ್ಲಿ ವಿಲೀನದ ಪ್ರಶ್ನೆಯ ಬಗ್ಗೆ ನಮ್ಮೊಡನೆ ಸೇರಿದ್ದವರೆಲ್ಲರೂ 1953ರ ಟ್ರಾಮ್ ದರ ಆಂದೋಲನದಲ್ಲಿ ನಮ್ಮೊಡನಿರಲಿಲ್ಲ, 1959ರ ಆಹಾರ ಆಂದೋಲನದಲ್ಲೂ ಇರಲಿಲ್ಲ. ಆದರೆ ಪ್ರತಿಯೊಂದು ಪ್ರಶ್ನೆಯ ಮೇಲೂ ವಿವಿಧ ರಾಜಕೀಯ ಶಕ್ತಿಗಳ ಹಾಗೂ ಜನ ವಿಭಾಗಗಳ ಸಾಕಷ್ಟು ವಿಶಾಲ ಒಗ್ಗಟ್ಟು ಸ್ಥಾಪಿಸಲು ನಾವು ಪ್ರಯತ್ನಿಸಿದೆವು. ಡಾ॥ ಶ್ಯಾಮಪ್ರಸಾದ್ ಮುಖರ್ಜಿಯವರಿಗಿಂತ ಸೈದ್ಧಾಂತಿಕವಾಗಿ ನಾವು ಏಕದಂ ಭಿನ್ನವಾಗಿದ್ದರೂ ಕೆಲವು ನಿರ್ದಿಷ್ಟ ಪ್ರಶ್ನೆಗಳ ಮೇಲೆ ಅವರೊಡನೆ ದುಡಿದೆವು; ಸಂಸತ್ತಿನ ಚುನಾವಣೆಗಳಲ್ಲಿ ಡಾ॥ ಮೇಘನಾದ ಸಹಾರನ್ನು ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧ ಸಂಯುಕ್ತ ರಂಗದ ಅಭ್ಯರ್ಥಿಯಾಗಿ ನಿಲ್ಲಿಸಿದೆವು. ಶ್ರೀ ಎನ್. ಚಟರ್ಜಿಯವರು ಹಿಂದೂ ಮಹಾಸಭಾದ ಅಧ್ಯಕ್ಷತೆ ತ್ಯಜಿಸಿದ ಮೇಲೆ ಅವರನ್ನು ನಮ್ಮ ಬೆಂಬಲದ ಸ್ವತಂತ್ರ ಅಭ್ಯರ್ಥಿಯಾಗಿ ನಿಲ್ಲಿಸಿದೆವು.

ಪಶ್ಚಿಮ ಬಂಗಾಳದ ಮೂರು ದಶಕಗಳ ಹೋರಾಟದ ಅನುಭವ

—ಜ್ಯೋತಿಬಸು

ದೀರ್ಘಾವಧಿಯ ದೃಷ್ಟಿ

ಇನ್ನೊಂದೆಡೆ, ಕೇವಲ ಒಗ್ಗಟ್ಟಿನ ಹೆಸರಲ್ಲಿ, ನಾವು ಎಂದೂ ನಮ್ಮ ಹೋರಾಟದ ದೀರ್ಘಕಾಲೀನ ದೃಷ್ಟಿಕೋಣವನ್ನು ಕಡೆಗಣಿಸಲಿಲ್ಲ. ವ್ಯಾಪಕ ಆಂದೋಲನಗಳ ಪ್ರಶ್ನೆಗಳ ಬಗ್ಗೆ ಹಾಗೂ ಅವನ್ನು ಜನತೆಯ ಮುಂದೆ ಹೇಗಿಡಬೇಕೆಂಬುದರ ಬಗ್ಗೆ ನಾವು ಸ್ಪಷ್ಟ ಕಲ್ಪನೆ ಹೊಂದಿದ್ದೆವು. ಒಂದು ಉದಾಹರಣೆ ಕೊಡುತ್ತೇನೆ:

1956ರಲ್ಲಿ ರಾಜ್ಯಗಳ ಭಾಷಾವಾರು ಪುನರ್ವಿಂಗಡಣೆ ಹಾಗೂ ಗಡಿಗಳ ಬಗ್ಗೆ ದೇಶವ್ಯಾಪೀ ಆಂದೋಲನ, ವಿಶೇಷವಾಗಿ ಮಹಾರಾಷ್ಟ್ರ, ಗುಜರಾತ್ ಹಾಗೂ ಪಂಜಾಬಿನಲ್ಲಿ ನಡೆಯಿತು. ಪಶ್ಚಿಮ ಬಂಗಾಳದಲ್ಲೂ ಕೆಲವು ರಾಜಕೀಯ ಪಕ್ಷಗಳು ಈ ಪ್ರಶ್ನೆಯನ್ನೆತ್ತಿ ಬಿಹಾರ್, ಒರಿಸ್ಸಾ ಹಾಗೂ ಅಸ್ಸಾಂನ ಕೆಲವು ಭಾಗಗಳನ್ನು ಪಶ್ಚಿಮ ಬಂಗಾಲಕ್ಕೆ ಸೇರಿಸಬೇಕೆಂದು ಕೇಳಿಕೆಯಿಟ್ಟವು. ನಾವು ರಾಜ್ಯ ಪುನರ್ವಿಂಗಡಣೆಯನ್ನು ಬೆಂಬಲಿಸಿದರೂ ಆ ಪಕ್ಷಗಳ ನಿರ್ದಿಷ್ಟ ಬೇಡಿಕೆಗಳ ಬಗ್ಗೆ ನಮಗೆ ಒಪ್ಪಿಗೆಯಿರಲಿಲ್ಲ. ಸರಿಯಾಗಿ ನಿರ್ದೇಶಿಸದಿದ್ದರೆ ಈ ಆಂದೋಲನ ಒಂದು ಸಂಕುಚಿತ ಹಾಗೂ ಹಿಂದುಳಿದ ಆಂದೋಲನವಾಗಿ ವಿಘಟಿತಗೊಳ್ಳಬಹುದೆಂಬ ಅರಿವೂ ನಮಗಿತ್ತು. ಆದ್ದರಿಂದಲೇ ಆಂದೋಲನದ ನಾಯಕತ್ವದಲ್ಲಿ ಉಳಿದರೂ ನಾವು ಪ್ರಾಂತೀಯತೆಯ ಉಸಬಿನೆಡೆ ಆಂದೋಲನವನ್ನು ಎಳೆದೊಯ್ಯಬಹುದಾದ ಪಕ್ಷಗಳನ್ನು ಸಂಯುಕ್ತ ರಂಗದಲ್ಲಿ ಸೇರಿಸಿಕೊಳ್ಳಲು ನಿರಾಕರಿಸಿದೆವು.

ಅದೇ ರೀತಿ ಅಸ್ಸಾಂನಲ್ಲಿ ಅಲ್ಪಸಂಖ್ಯಾತರ ದಮನದ ವಿರುದ್ಧ ಪ್ರತಿಭಟನಾ ಆಂದೋಲನ ಹಾಗೂ ಮುಷ್ಕರಗಳಿಗೆ ಕರೆಕೊಟ್ಟಾಗ ಸಂಕುಚಿತ ಪ್ರಾಂತೀಯತೆಯ ಶಕ್ತಿಗಳ ಕೈಮೇಲಾಗದಂತೆ ಜಾಗ್ರತೆ ವಹಿಸಿದೆವು. ಇಂತಹ ಮುಷ್ಕರ ಹಾಗೂ ಆಂದೋಲನ ಆರಂಭಿಸುವ ಮೊದಲು ನಮ್ಮ ಕಾರ್ಯಕರ್ತರು ಸಭೆ ಏರ್ಪಡಿಸಿ ಆಂದೋಲನದ ಉದ್ದೇಶ ವಿವರಿಸುತ್ತಿದ್ದರು ಹಾಗೂ ಅಲ್ಪಸಂಖ್ಯಾತರ ರಕ್ಷಣೆ ಮತ್ತು ವಿವಿಧ ಭಾಷಾ ಜನರ ನಡುವೆ ಸೌಹಾರ್ದ ಕಾಯ್ದುಕೊಳ್ಳುವ ಸಂಪೂರ್ಣ ಹೊಣೆ ವಹಿಸುತ್ತಿದ್ದರು.

ತೀವ್ರ ಪರಿವರ್ತನೆ

ಬಹಳ ಸಮಯದ ವರೆಗೆ ನಮ್ಮ ಪ್ರಭಾವ ಕೇವಲ ಬಂಗಾಳಿಯೇತರ ಕೈಗಾರಿಕಾ ಕಾರ್ಮಿಕರ ನಡುವೆ ಮಾತ್ರ ಸೀಮಿತವಾಗಿತ್ತು. ಆದರೆ ಆಂದೋಲನ ಹಾಗೂ ಹೋರಾಟಗಳ ಮೂಲಕ ಅವರ ವಿಶ್ವಾಸ ಗೆದ್ದುಕೊಳ್ಳಲು ನಾವು ನಿರಂತರ ಯತ್ನ ನಡೆಸಿದೆವು. ಪರಿಣಾಮವಾಗಿ, ನಂತರದ ವರ್ಷಗಳಲ್ಲಿ ಬಹುಸಂಖ್ಯೆಯ ಬಂಗಾಲಿಯೇತರ ಕಾರ್ಮಿಕರು ತಮ್ಮ ಅನುಭವಗಳ ಬೆಳಕಿನಲ್ಲೇ ನಮಗೆ ಟ್ರೇಡ್ ಯೂನಿಯನ್ ಚಳವಳಿಗಳಲ್ಲಿ ಮಾತ್ರವಲ್ಲ ರಾಜಕೀಯವಾಗಿಯೂ ಬೆಂಬಲ ನೀಡಲು ನಿರ್ಧರಿಸಿದರು.

ಐವತ್ತರ ದಶಕದ ಸಂಯುಕ್ತರಂಗ ಆಂದೋಲನಗಳು ರಾಜ್ಯದ ರಾಜಕೀಯ ರಂಗದಲ್ಲೊಂದು ತೀವ್ರ ಪರಿವರ್ತನೆ ತಂದವು. ನಾವು ಆಳುವ ಪಕ್ಷಕ್ಕೊಂದು ಪರ್ಯಾಯ ರಾಜಕೀಯ ಶಕ್ತಿಯಾಗಿ ಮೂಡಿಬಂದೆವು; ಬೇರೆ ರಾಜ್ಯಗಳಲ್ಲಾದಂತೆ ವಿರೋಧ ಪಕ್ಷಗಳು ತಮ್ಮೊಡನೇ ತೀವ್ರ ಕಿತ್ತಾಟಗಳಿಂದ ಆತ್ಮನಾಶದ ಮಾರ್ಗವನ್ನು ಇಲ್ಲಿ ಹಿಡಿಯಲಿಲ್ಲ. ಸಂಯುಕ್ತರಂಗದ ನೇತೃತ್ವದ ಹೋರಾಟಗಳು ರಾಜ್ಯದ ರಾಜಕೀಯ ಶಕ್ತಿಗಳು ಕಾಂಗ್ರೆಸ್ ಹಾಗೂ ಸಂಯುಕ್ತ ರಂಗ ಎಂಬ ಎರಡು ಪಾಳೆಯಗಳಲ್ಲಿ ಧ್ರುವೀಕರಣ ಹೊಂದುವಂತೆ ಮಾಡಿದವು. ಒಂದು ಶಕ್ತಿಶಾಲೀ ಸಂಯುಕ್ತರಂಗ ರಾಜಕೀಯದ ಸಂಪ್ರದಾಯ ಸ್ಥಾಪಿತವಾಗಿ ಇತರ ಕಾಂಗ್ರೆಸ್ಸೇತರ ರಾಜಕೀಯ ಪಕ್ಷಗಳಿಗೆ ರಾಜ್ಯದಲ್ಲಿ ಎಡೆಯಿಲ್ಲದಂತೆ ಮಾಡಿದವು.

ರಂಗವನ್ನು ಬಿಡಲು ನಿರ್ಧರಿಸಿದವರನ್ನು ಜನತೆ ತಿರಸ್ಕರಿಸಿತು; ಅವರು ತಮಗೆ ತಾವೇ ತೊಂದರೆ ಮಾಡಿಕೊಂಡರು. ಎಸ್.ಯು.ಸಿ.ಗೆ ಹೀಗಾಯಿತು. ತಾತ್ಕಾಲಿಕವಾಗಿ ನಮ್ಮನ್ನು ಬಿಟ್ಟು ಹೋದ ನಮ್ಮ ಕೆಲವು ಎಡಪಂಥೀಯ ಗೆಳೆಯರು ತಮ್ಮ ಅನುಭವ ಹಾಗೂ ನಮ್ಮ ಪ್ರಯತ್ನಗಳಿಂದಾಗಿ ಮತ್ತೆ ನಮ್ಮೊಡನೆ ಬಂದು ಸೇರಿದರು. ಸರ್ವಾಧಿಕಾರದ ವಿರುದ್ಧ ಹೋರಾಡಲು ನಾವು ಜನತಾಪಕ್ಷದೊಂದಿಗೆ ಸೇರಿಕೊಂಡೆವು. 1977ರ ಸಂಸತ್ ಚುನಾವಣೆಗಳಲ್ಲಿ ಕಾಂಗ್ರೆಸ್ ವಿರುದ್ಧ ಸಂಯುಕ್ತವಾಗಿ ಗೆದ್ದೆವು. 1977ರ ಜೂನ್ ತಿಂಗಳ ವಿಧಾನಸಭಾ ಚುನಾವಣೆಗಳಲ್ಲಿ ಸರ್ವಾಧಿಕಾರದ ವಿರುದ್ಧ ಒಗ್ಗಟ್ಟು ಕಾಪಾಡಲು ಒಂದು ಕಾರ್ಯಕ್ರಮದ ಆಧಾರದ ಮೇಲೆ ಜನತಾಪಕ್ಷಕ್ಕೆ ನಾವು 52% ಸೀಟುಗಳನ್ನು ಬಿಟ್ಟುಕೊಡಲು ಸಿದ್ಧರಿದ್ದೆವು. ಆದರೆ ಅವರು ನಮ್ಮ ಈ ತ್ಯಾಗದ ಹಾಗೂ ಹೊಂದಾಣಿಕೆಯ ನಿಲುವನ್ನು ನಮ್ಮ ದೌರ್ಬಲ್ಯದ ಸಂಕೇತವೆಂದು ತಪ್ಪು ತಿಳಿದರು, ನಮ್ಮೊಡನೆ ಸೇರಲು ನಿರಾಕರಿಸಿದರು. ಪರಿಣಾಮವಾಗಿ ನಾವು ಅವರಿಂದ ಬೇರೆಯಾಗಿ ಎಡಪಕ್ಷಗಳ ಚುನಾವಣಾರಂಗ ಮಾಡಿಕೊಳ್ಳಬೇಕಾಯಿತು. ಆದರೆ ಪಶ್ಚಿಮಬಂಗಾಳದ ಜನಸಾಮಾನ್ಯರು ಜನತಾ ಪಕ್ಷದ ಈ ನಿಲುವನ್ನು ಸಮರ್ಥಿಸಲಿಲ್ಲ. ಚುನಾವಣೆಯಲ್ಲಿ ನಾವು ಭಾರೀ ಜಯಗಳಿಸಿದರೆ ಜನತಾಪಕ್ಷ ಕಷ್ಟದಿಂದ 28ಸ್ಥಾನಗಳನ್ನಷ್ಟೇ ಪಡೆಯಿತು.

ಕೋಮುವಾದಿಗಳ ಸೋಲು

ಸಂಯುಕ್ತರಂಗದ ನೇತೃತ್ವದ ಆಂದೋಲನಗಳ ಇನ್ನೊಂದು ಪ್ರಮುಖ ಪರಿಣಾಮವೆಂದರೆ ಕೋಮುವಾದಿಗಳ ಸೋಲು. ನಲ್ವತ್ತರ ದಶಕದಲ್ಲಿ ಮತ್ತು ಐವತ್ತರ ದಶಕದಲ್ಲೂ ಸ್ವಲ್ಪ ಸಮಯ ಪಶ್ಚಿಮ ಬಂಗಾಳದಲ್ಲಿ ಹಿಂದೂ ಮಹಾಸಭಾ ಸಾಕಷ್ಟು ಪ್ರಭಾವ ಹೊಂದಿತ್ತು. ಡಾ॥ ಶ್ಯಾಮಪ್ರಸಾದ್ ಮುಖರ್ಜಿಯವರಿಗೆ ಬಹಳ ಅನುಯಾಯಿಗಳಿದ್ದರು. 1952ರ ಚುನಾವಣೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮತಗಳೂ, ಎಂಟು ಸ್ಥಾನಗಳೂ ಹಿಂದೂ ಮಹಾಸಭಾಕ್ಕೆ ದೊರೆತಿತ್ತು. ಐವತ್ತರ ದಶಕ ಮುಗಿಯುವ ಹೊತ್ತಿಗೆ ಈ ಕೋಮುವಾದೀ ಪಕ್ಷ ಒಂದು ರಾಜಕೀಯ ಶಕ್ತಿಯಾಗಿ ರಾಜ್ಯದಲ್ಲಿ ನಿರ್ನಾಮಗೊಂಡಿತ್ತು. ಕಾರಣ ಜನತೆ ಸಂಯುಕ್ತ ರಂಗವನ್ನು ಆಳುವ ಪಕ್ಷಕ್ಕೆ ಪರ್ಯಾಯವಾಗಿ ಸ್ವೀಕರಿಸಿತ್ತು. ಆದ್ದರಿಂದ ರಾಜ್ಯದಲ್ಲಿ ಕೋಮುವಾದಿ ತತ್ವಗಳು ಕಾಂಗ್ರೆಸ್ ಬಣದಲ್ಲಿ ಆಸರೆ ಪಡೆಯಬೇಕಾಯಿತು.

ನಿರಾಶ್ರಿತರ ಆಂದೋಲನದಲ್ಲಿ ಕೋಮುವಾದಿಗಳು ದೊಡ್ಡ ಸೋಲನ್ನನುಭವಿಸಿದರು. ಅವಿಭಜಿತ ಬಂಗಾಳದ ಪೂರ್ವಭಾಗದಿಂದ ಕೋಮು ಘರ್ಷಣೆಗೆ ತುತ್ತಾಗಿ ಬಂದ ಈ ನೆಲೆಯಿಲ್ಲದ ಬಡಪಾಯಿಗಳು ತಮ್ಮ ನೇತೃತ್ವವನ್ನು ನಿಸ್ಸಂಕೋಚವಾಗಿ ಸ್ವೀಕರಿಸಬಹುದೆಂದು ಕೋಮುವಾದಿಗಳು ಆಶೆಯಿರಿಸಿಕೊಂಡಿದ್ದರು. ಇಂತಹ ಸಾಧ್ಯತೆ ಕೇವಲ ಕಾಲ್ಪನಿಕವೂ ಆಗಿರಲಿಲ್ಲ. ಆದರೆ ಈ ನಿರಾಶ್ರಿತರನ್ನು ಸಂಘಟಿಸುವಲ್ಲಿ, ಪೋಲಿಸ್ ದಬ್ಬಾಳಿಕೆಯ ವಿರುದ್ಧ ಹೋರಾಡುವಲ್ಲಿ, ಹೊಸ ವಾತಾವರಣದಲ್ಲಿ ಅವರು ಮತ್ತೆ ವಿಶ್ವಾಸದಿಂದಿರುವಂತೆ ಮಾಡುವಲ್ಲಿ ನಮ್ಮ ಸಂಗಾತಿಗಳು ತೋರಿದ ಶಕ್ತಿ-ಸಾಮರ್ಥ್ಯ, ಅವರ ಪ್ರಯತ್ನ ಇವೆಲ್ಲವುಗಳಿಂದಾಗಿ ಈ ನಿರಾಶ್ರಿತರು ಅವರ ಸಾಮೂಹಿಕ ಸಂಘಟನೆಯಿಂದ UCRC ಹಾಗೂ ನಮ್ಮ ಪಕ್ಷದ ದೃಢ ಬೆಂಬಲಿಗರಾದರು. ಈ ಬೆಳವಣಿಗೆ ರಾಜ್ಯದಲ್ಲಿ ನಮ್ಮ ಪ್ರಭಾವವನ್ನು ವಿಸ್ತರಿಸಿತು ಮತ್ತು ಜತೆಗೇ ಕೋಮು ಕಲಹಗಳು ರಾಜ್ಯದಲ್ಲಿ ಸಾಮಾಜಿಕ ಜೀವನದ ಶಾಶ್ವತ ಲಕ್ಷಣಗಳಾಗುವ ಭಯಾನಕ ಸಾಧ್ಯತೆಯನ್ನೂ ಇಲ್ಲವಾಗಿಸಿದಂತಾಯಿತು.

ಆ ನಂತರ ಕಳೆದ ಮೂವತ್ತು ವರ್ಷಗಳಲ್ಲಿ ನಿರಾಶ್ರಿತರ ನಡುವೆ ನಮ್ಮ ಪ್ರಭಾವವನ್ನು ಕಡಿಮೆಮಾಡಲುಹಲವು ವಿಫಲ ಯತ್ನಗಳು ನಡೆದವು. ಇಂತಹ ಇತ್ತೀಚಿನ ಪ್ರಯತ್ನವೆಂದರೆ ಮರೀಚ್ ಝೂಪಿ ಘಟನೆ. ದಂಡಕಾರಣ್ಯ ಕ್ಷೇತ್ರದಲ್ಲಿ ನೆಲೆಸಿದ್ದ ಒಂದು ಲಕ್ಷಕ್ಕಿಂತಲೂ ಹೆಚ್ಚು ನಿರಾಶ್ರಿತರ ದಾರಿತಪ್ಪಿಸಿ ಪಶ್ಚಿಮಬಂಗಾಳದೊಳಗೆ ಬಂದು ಇಲ್ಲಿ ನೆಲಸುವಂತೆ ಪ್ರೇರೇಪಿಸಲಾಯಿತು. ಇದು ನಮ್ಮ ಆರ್ಥಿಕ ಸ್ಥಿತಿಗೊಂದು ಗಂಭೀರ ಪರಿಣಾಮವುಂಟುಮಾಡುವ ಸಾಧ್ಯತೆಯಿತ್ತು. ಆದರೆ ಕೊನೆಗೆ ಅವರು ತಮ್ಮ ತಪ್ಪನ್ನು ಅರಿತುಕೊಂಡರು. ನಾವು ಅವರನ್ನು ವಾಪಸು ಕಳಿಸುವುದು ಸಾಧ್ಯವಾಯಿತು.

ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ಜಾತಿ, ಧರ್ಮ ಅಥವಾ ಭಾಷೆ ಪ್ರಮುಖ ಪಾತ್ರವಹಿಸದೇ ಇರಲು ಎರಡು ಪ್ರಮುಖ ಕಾರಣಗಳಿವೆ. ಮೊದಲನೆಯದು ಚಾರಿತ್ರಿಕ ಕಾರಣ. ರಾಜಾರಾಮ ಮೋಹನ್ ರಾಯ್, ಈಶ್ವರ ಚಂದ್ರ ವಿದ್ಯಾಸಾಗರ, ಸ್ವಾಮಿ ವಿವೇಕಾನಂದ ಹಾಗೂ ರವೀಂದ್ರನಾಥ ಟಾಗೋರರಂತಹ ಮಹಾನ್ ಸಮಾಜ ಸುಧಾರಕರು ಹಾಗೂ ವಿದ್ವಾಂಸರ ಕೊಡುಗೆ. ಎರಡನೆಯದಾಗಿ ಸಂಯುಕ್ತ ರಂಗದ ನೇತೃತ್ವದ ಚಳುವಳಿಗಗು ಸಾಮಾನ್ಯ ಜನತೆಯ ಬೇಸರ ಹಾಗೂ ಕಾಂಗ್ರೆಸ್ ವಿರೋಧೀ ಭಾವನೆಗಳಿಗೆ ಕುರುಡು ಕೋಮುವಾದ ಹಾಗೂ ಸಂಕುಚಿತವಾದದ ಕಾರ್ಗತ್ತಲೆಯಿಂದ ದೂರವಾದ ಆರೋಗ್ಯಕರ ಹಾಗೂ ಜಾತ್ಯಾತೀತ ರಾಜಕೀಯ ರೂಪಕೊಡುವುದಕ್ಕೆ ಸಹಾಯ ಮಾಡಿದ್ದು. ಆದರೂ ಅಪಾಯ ಇನ್ನೂ ಉಳಿದಿದೆ ಅದಕ್ಕಾಗಿ ಸದಾ ಜಾಗರೂಕತೆ ಅಗತ್ಯ. ●

(ಮುಂದುವರಿಯುವುದು)

ಹನ್ನೊಂದನೇ ಅಧಿವೇಶನದ ಠರಾವುಗಳು

ಜನವರಿ 26 ರಿಂದ 31ರವರೆಗೆ ವಿಜಯವಾಡಾದಲ್ಲಿ ಜರುಗಿದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಹನ್ನೊಂದನೇ ಅಖಿಲ ಭಾರತ ಅಧಿವೇಶನದಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ವಿಷಯಗಳ ಮೇಲೆ ಚರ್ಚೆ ನಡೆದು ಹಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು ಅವುಗಳನ್ನು ಸಂಕ್ಷಿಪ್ತವಾಗಿ ಈ ಮುಂದೆ ಕೊಡಲಾಗಿದೆ.

ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಹಾಗೂ ಕೋಮು ಗಲಭೆಗಳು

ದೇಶದ ವಿವಿಧ ಭಾಗಗಳಲ್ಲಿ ಆಗಾಗ ಸಂಭವಿಸುತ್ತಿರುವ ಕೋಮು ಗಲಭೆಗಳ ಕುರಿತು 11ನೇ ಸಮ್ಮೇಳನ ತೀವ್ರ ಆತಂಕ ವ್ಯಕ್ತಪಡಿಸುತ್ತದೆ. ಹಿಂದೂ ಆಕ್ರಮಣಶೀಲ ಸಂಕುಚಿತವಾದಿಗಳೊಂದಿಗೆ ಆಡಳಿತ ಸಿಬ್ಬಂದಿ ಕೂಡಿಕೊಂಡು ನಡೆಸುವ ಉದ್ರೇಕಕಾರಿ ಹಾಗೂ ಹತ್ಯಾಕಾರಿ ಆಕ್ರಮಣಗಳಿಗೆ ಮುಸ್ಲಿಂ ಜನತೆ ಗುರಿಯಾಗುತ್ತದೆ. ಇತ್ತೀಚಿನ ಜಮಶೇಡ್‌ಪುರ ದಂಗೆಯ ವರದಿಯೂ ಸೇರಿದಂತೆ ಹಲವು ತನಿಖಾ ವರದಿಗಳಿಂದ ಇಂತಹ ಗಲಭೆ ನಡೆಸುವಲ್ಲಿ ಆರ್.ಎಸ್.ಎಸ್.ನ ಕೈವಾಡವಿರುವುದು ಕಂಡು ಬಂದಿದೆ.

ಬೂರ್ಜ್ವಾ–ಭೂಮಾಲಿಕ ಆಳ್ವಿಕೆಯಡಿಯಲ್ಲೂ ಸಂವಿಧಾನ ಏನೆಲ್ಲಾ ಘೋಷಿಸಿದ್ದರೂ ಮುಸ್ಲಿಂ ಅಲ್ಪಸಂಖ್ಯಾತರೊಡನೆ ಭೇದಭಾವದಿಂದ ನಡೆದುಕೊಳ್ಳಲಾಗುತ್ತಿದೆ. ಆರ್ಥಿಕವಾಗಿ ದಬ್ಬಾಳಿಕೆಗೊಳಗಾಗಿರುವುದು ಮಾತ್ರವಲ್ಲದೆ ಭಾಷೆ, ಸಂಸ್ಕೃತಿ, ಉದ್ಯೋಗದ ಕ್ಷೇತ್ರಗಳಲ್ಲೂ ಮುಸ್ಲಿಮರು ಭೇದಭಾವಕ್ಕೆ ಗುರಿಯಾಗಿದ್ದಾರೆ. ಅವರ ಜನಸಂಖ್ಯೆ ಸಾಕಷ್ಟು ಪ್ರಮಾಣದಲ್ಲಿರುವಲ್ಲೂ ಉರ್ದುವಿಗೆ ಎರಡನೇ ಭಾಷೆಯ ಸ್ಥಾನಮಾನ ಕೊಟ್ಟಿಲ್ಲ.

ತದ್ವಿರುದ್ಧವಾಗಿ ಪಶ್ಚಿಮಬಂಗಾಳ, ಕೇರಳ, ತ್ರಿಪುರಾ ರಾಜ್ಯಗಳಲ್ಲಿ ಅಂದರೆ ಎಲ್ಲೆಲ್ಲಿ ಎಡಪ್ರಜಾಪ್ರಭುತ್ವ ಚಳುವಳಿ ಬಲಶಾಲಿಯಾಗಿದೆಯೋ ಕೋಮು ಗಲಭೆ ಆರಂಭಿಸಬೇಕೆಂಬ ಕೋಮುವಾದೀ ಶಕ್ತಿಗಳು ನಡೆಸಲೆತ್ನಿಸಿದ ಹಲವು ಕುಚೇಷ್ಟೆಗಳನ್ನು ವಿಫಲಗೊಳಿಸಲಾಗಿದೆ. ಅಲ್ಪಸಂಖ್ಯಾತರ ಹಕ್ಕು ಹಾಗೂ ಹಿತಾಸಕ್ತಿಗಳನ್ನು ರಕ್ಷಿಸಲಾಗಿದೆ.

ಸಿ. ಪಿ. ಐ. (ಎಂ) ಸದಾ ಮುಸ್ಲಿಂ ಅಲ್ಪಸಂಖ್ಯಾತರನ್ನು ಸಮರ್ಥಿಸಿದೆ ಹಾಗೂ ಭೇಧಭಾವ ದಬ್ಬಾಳಿಕೆಯ ವಿರುದ್ಧ ಧನಿಯೆತ್ತಿದೆ.

ಆದರೆ ಸಮಸ್ತ ದೇಶದ ಹಿನ್ನೆಲೆಯಲ್ಲಿ ನೋಡುವಾಗ ಮುಸ್ಲಿಂ ಜನತೆ ವರ್ಗ ಹಾಗೂ ಪ್ರಜಾಪ್ರಭುತ್ವವಾದಿ ಚಳುವಳಿಯಿಂದ ದೂರಸರಿದು ನಿಂತಿದ್ದಾರೆ. ಅವರ ಈ ದೌರ್ಬಲ್ಯದ ದುರ್ಲಾಭವನ್ನು ಜಮಾತ್–ಎ-ಇಸ್ಲಾಮಿಯಂತಹ ಪ್ರತಿಕ್ರಮವಾದೀ ಶಕ್ತಿಗಳು ಪಡೆಯುತ್ತಿವೆ. ಈ ಶಕ್ತಿಗಳು ಸಾಮ್ರಾಜ್ಯಶಾಹಿಗಳ ಹಿತಾಸಕ್ತಿಗೆ ಪೂರಕವಾಗಿ ಕೆಲಸಮಾಡುತ್ತಿವೆ. ಕಾಂಗ್ರೆಸ್ (ಐ) ಸರಕಾರದಿಂದ ಪ್ರತಿಕ್ರಿಯವಾದೀ ರಿಯಾಯ್ತಿ ಪಡೆಯುತ್ತಿವೆ.

ಕೋಮುವಾದಿಗಳ ಶಕ್ತಿಗಳ ವಿರುದ್ಧ ಜನತೆಯ ಅರಿವನ್ನು ಜಾಗೃತಗೊಳಿಸಿ, ಅಲ್ಪ ಸಂಖ್ಯಾತರು ತಮ್ಮ ನ್ಯಾಯಬದ್ಧ ಬೇಡಿಕೆಗಳನ್ನು ಪಡೆಯುವಂತೆ ಹಾಗೂ ಪ್ರತಿಕ್ರಿಯವಾದೀ ತತ್ವಗಳ ಹಂಚಿಕೆ ಮಣ್ಣುಗೂಡುವಂತೆ ಪ್ರಯತ್ನಿಸಬೇಕೆಂದು ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳಿಗೆ ಸಮ್ಮೇಲನ ಕರೆಕೊಡುತ್ತದೆ.

ಮುಸ್ಲಿಂ ಜನತೆಯ ಭವಿಷ್ಯ ಪ್ರಜಾಸತ್ತಾತ್ಮಕ ಚಳವಳಿಯನ್ನು ಸೇರಿಕೊಳ್ಳುವುದರಲ್ಲಿದೆ. ಅದರಿಂದ ಮಾತ್ರ ಕೋಮುಶಕ್ತಿಗಳ ಆಕ್ರಮಣದ ವಿರುದ್ಧ ಹೋರಾಡಲು ಮತ್ತು ನ್ಯಾಯಬದ್ಧ ಬೇಡಿಕೆಗಳನ್ನು ಪಡೆಯಲು ಸಾಧ್ಯ.

ಆದಿವಾಸಿ ಅಶಾಂತಿ

34 ವರ್ಷಗಳ ಸ್ವಾತಂತ್ರ್ಯದ ನಂತರವೂ ಆದಿವಾಸಿಗಳ ಶೋಚನೀಯ ಜೀವನಸ್ಥಿತಿಯ ಬಗ್ಗೆ ಸಮ್ಮೇಳನ ತೀವ್ರ ಆತಂಕ ವ್ಯಕ್ತಪಡಿಸುತ್ತದೆ. ಅವರಿಗೆ ಮಾನವೀಯ ಬಾಳ್ವೆ ನಡೆಸಲೂ ಅವಕಾಶ ಕೊಟ್ಟಿಲ್ಲ; ಅವರ ನುಡಿ, ಸಂಸ್ಕೃತಿ, ಹಾಗೂ ಸಾಮಾಜಿಕ ಹಿತಾಸಕ್ತಿಗಳನ್ನು ಕಾಪಾಡಲಾಗುತ್ತಿಲ್ಲ.

ತ್ರಿಪುರಾ ಹಾಗೂ ಪಶ್ಚಿಮಬಂಗಾಳದಲ್ಲಿ ಅವರ ಸಮಸ್ಯೆಗಳನ್ನು ಅರಿತು ಅವರಿಗೆ ಪ್ರಜಾಸತ್ತಾತ್ಮಕ ಹಕ್ಕುಗಳು ದೊರೆಯುವಂತೆ ಮಾಡಲಾಗಿದೆ. ಕಾಂಗ್ರೆಸ್ (ಐ) ರಾಜ್ಯಗಳಲ್ಲಿ ಇದಕ್ಕೆ ಅವಕಾಶವಿಲ್ಲ ಇಂತಹ ಪ್ರಯತ್ನಗಳನ್ನೂ ನಡೆದಿಲ್ಲ. ಆದ್ದರಿಂದ ಆದಿವಾಸಿ ಅಶಾಂತಿ ವಿಶೇಷವಾಗಿ ಈಶಾನ್ಯ ಕ್ಷೇತ್ರದಲ್ಲಿ ಹೆಚ್ಚುತ್ತಿದೆ.

ಎಲ್ಲರೂ ಪ್ರಜಾಪ್ರಭುತ್ವ ಚಳುವಳಿಯಿಂದ ಪರಕೀಯರಾಗಿ ದೂರ ನಿಂತಿರುವುದರಿಂದಾಗಿ ವಿದೇಶೀ ಕ್ರಿಶ್ಚಿಯನ್ ಮಿಶನ್‌ಗಳಿಗೆ ಆದಿವಾಸಿ ಕ್ಷೇತ್ರಗಳು ಪ್ರತ್ಯೇಕವಾದ ಹರಡಲು ಪ್ರಶಸ್ತ ಸ್ಥಳಗಳಾಗಿವೆ. ಅವರ ಶೋಚನೀಯ ಸ್ಥಿತಿ ಝರ್‌ಖಂಡ್‌ನಂತಹ ಪಕ್ಷ ಅವರನ್ನು ದಾರಿತಪ್ಪಿಸಿ ಪ್ರಜಾಪ್ರಭುತ್ವ ಚಳುವಳಿಯಿಂದ ದೂರವಿರುವಂತೆ ಮಾಡಿದೆ.

ಸಾಮ್ರಾಜ್ಯಶಾಹಿಗಳ ಅಪಪ್ರಚಾರದ ವಿರುದ್ಧ ಧೈರ್ಯದಿಂದ ಹೋರಾಡಿ ಈ ವಿದೇಶೀ ಮಿಶನ್‌ಗಳ ಹಂಚಿಕೆಗಳನ್ನು ಬಯಲುಗೊಳಿಸಬೇಕೆಂದು ಸಮ್ಮೇಳನ ಎಲ್ಲಾ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಕರೆಕೊಡುತ್ತದೆ. ಹೀಗಾಗಬೇಕಾದರೆ ಆದಿವಾಸಿಗಳ ಶೋಷಣೆಯ ವಿರುದ್ಧ ಸಂಯುಕ್ತ ಹೋರಾಟ ನಡೆಸಿ ಸಾಲಗಾರರ ಹಾಗೂ ಭೂಮಾಲಿಕರ ಕಪಿಮುಷ್ಠಿಯಿಂದ ಅವರನ್ನು ಪಾರುಮಾಡಬೇಕು. ಆದಿವಾಸಿ ಕ್ಷೇತ್ರಗಳಿಗೆ ಪ್ರಾದೇಶಿಕ ಸ್ವಯಮಾಧಿಕಾರದ ಬೇಡಿಕೆಯನ್ನು ಸಮ್ಮೇಳನ ಬೆಂಬಲಿಸುತ್ತದೆ. ಭಾರತದ ಜನತೆ ಶೋಷಣೆಯ ವಿರುದ್ಧ ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ನಡೆಸುತ್ತಿರುವ ಹೋರಾಟದಿಂದ ಪ್ರತ್ಯೇಕವಾಗಿ ನಿಂತು ಆದಿವಾಸಿಗಳ ಉದ್ಧಾರ ಸಾಧ್ಯವಿಲ್ಲ. ಆದ್ದರಿಂದ ಜನಸಾಮಾನ್ಯರ ಹೋರಾಟಗಳಲ್ಲಿ ಈ ಅತ್ಯಂತ ಶೋಷಿತ ವಿಭಾಗವೂ ಭಾಗವಹಿಸುವಂತೆ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಪ್ರಯತ್ನಿಸಬೇಕೆಂದು ಸಿ.ಪಿ.ಐ.(ಎಂ) ಕರೆ ನೀಡುತ್ತದೆ.

19ನೇ ಜನವರಿಯ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ

ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಲನ ಸಮಿತಿ ಹಾಗೂ ವಿವಿಧ ವಲಯಗಳಲ್ಲಿನ ಲಕ್ಷಗಟ್ಟಲೆ ಕಾರ್ಮಿಕರಿಗೆ 11ನೇ ಅಧಿವೇಶನ ಹಾರ್ದಿಕ ಅಭಿನಂದನೆ ಸಲ್ಲಿಸುತ್ತದೆ. ಸರ್ವಾಧಿಕಾರೀ ಇಂದಿರಾ ಆಡಳಿತದ ಜನವಿರೋಧೀ, ಕಾರ್ಮಿಕ ವಿರೋಧೀ ಧೋರಣೆಗಳಿಗೆ ಪ್ರತಿಭಟನೆ ಬೆಳೆಸುವಲ್ಲಿ ಈ ಮುಷ್ಕರ ಹೊಸ ಮಾರ್ಗ ತೋರಿಸಿಕೊಟ್ಟಿದೆ.

ಪ್ರಧಾನಮಂತ್ರಿ ಹಾಗೂ ರಾಜ್ಯಗಳಲ್ಲಿನ ಆಕೆಯ ಕಾಂಗ್ರೆಸ್ (ಐ) ಸರಕಾರಗಳು ಸಾಧ್ಯವಿದ್ದ ಎಲ್ಲಾ ದಮನ ಕ್ರಮಗಳನ್ನು ಕೈಗೊಂಡು ಕಾರ್ಮಿಕರನ್ನು ಬೆದರಿಸಲು ಪ್ರಯತ್ನಿಸಿದರು. ಕಾಂಗ್ರೆಸ್ (ಐ) ಪಕ್ಷ ಮುಷ್ಕರವನ್ನು ವಿಫಲಗೊಳಿಸಲು ಮಧ್ಯ ಪ್ರವೇಶಿಸುವಂತೆ ಇಂದಿರಾ ಗಾಂಧಿಯವರೇ ಕರೆಕೊಟ್ಟರು. ಸರಕಾರೀ ನಿಯಂತ್ರಣದಲ್ಲಿನ ಪ್ರಸಾರ ಮಾಧ್ಯಮಗಳು ಅಪಪ್ರಚಾರದಲ್ಲಿ ರಾತ್ರಿ ಹಗಲು ನಿರತವಾಗಿದ್ದವು. ಯಾವುದೂ ನಡೆಯದಿದ್ದಾಗ ಮುಷ್ಕರದ ದಿನ ಇಂಟಕ್ (ಐ), ಕಾಂಗ್ರೆಸ್ (ಐ) ಎಂ.ಪಿ.ಗಳು, ಎಂ.ಎಲ್.ಎ.ಗಳು, ಕೆಲವೊಮ್ಮೆ ಸ್ವತಃ ಮಂತ್ರಿಗಳೇ ನೇತೃತ್ವ ವಹಿಸಿದ ಗೂಂಡಾ ಪಡೆಗಳನ್ನು ಕಾರ್ಮಿಕರಮೇಲೆ ಹರಿಯಬಿಡಲಾಯಿತು. ಪೋಲೀಸರು ಗೋಳಿಬಾರು ಮಾಡಿದರು.

ಈ ಎಲ್ಲಾ ಅಪಪ್ರಚಾರ, ದಾಳಿಗಳಿಗೆ ಬೆದರದೆ ದೇಶಾದ್ಯಂತ ಸುಮಾರು ಒಂದು ಕೋಟಿ 20 ಲಕ್ಷ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು. ಕೆಲವೆಡೆ ಸ್ವಯಂಪ್ರೇರಿತ ಬಂದ್‌ಗಳೂ ನಡೆದವು. ಮೊತ್ತಮೊದಲ ಬಾರಿಗೆ ಜಮ್ಮು ಹಾಗೂ ಕಾಶ್ಮೀರದ ಕಾರ್ಮಿಕ ವರ್ಗವೂ ಭಾರತದ ಕಾರ್ಮಿಕರ ಹೋರಾಟದ ಮುಖ್ಯ ಪ್ರವಾಹವನ್ನು ಸೇರಿಕೊಂಡಿತು.

ಮುಷ್ಕರ ಕೇವಲ ಒಂದೇ ದಿನದ್ದಾದರೂ ದಮನಕ್ರಮಗಳು ಇನ್ನೂ ಮುಂದುವರಿಯುತ್ತಿವೆ. ಪಕ್ಷದ ಸಮ್ಮೇಳನ ಇದನ್ನು ಖಂಡಿಸುತ್ತದೆ ಮತ್ತು ಎಲ್ಲಾ ಶಿಕ್ಷಾ ಕ್ರಮಗಳನ್ನು ತಕ್ಷಣ ವಾಪಸು ಪಡೆಯಬೇಕೆಂದು ಒತ್ತಾಯಿಸುತ್ತದೆ.

ಮುಷ್ಕರದ ಯಶಸ್ವಿಗಾಗಿ ದುಡಿಯುತ್ತಿರುವಾಗ ಕಾಂಗ್ರೆಸ್ (ಐ) ಗೂಂಡಾಗಳು ಹಾಗೂ ಪೋಲೀಸರ ಗುಂಡುಗಳಿಗೆ ಬಲಿಯಾದ ಹುತಾತ್ಮರಿಗೆ ಸಮ್ಮೇಳನ ಶ್ರದ್ಧಾಂಜಲಿ ಅರ್ಪಿಸುತ್ತದೆ. ಅವರ ದುಃಖತಪ್ತ ಕುಟುಂಬಗಳಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸುತ್ತದೆ.

ಕಾರ್ಮಿಕ ವರ್ಗದ ಈ ಮಹಾನ್ ಸಂಯುಕ್ತ ಕಾರ್ಯಾಚರಣೆ ಸಂಯುಕ್ತ ಕಾರ್ಮಿಕ ಚಳುವಳಿ ಕೇವಲ ಕಾರ್ಮಿಕರನ್ನು ಕುರಿತಂತೆ ಮಾತ್ರವಲ್ಲ ಎಲ್ಲಾ ಜನವಿಭಾಗಗಳ ಬಗ್ಗೆ ತನಗಿರುವ ಜವಾಬ್ದಾರಿಯನ್ನು ನಿರ್ವಹಿಸಲಾರಂಭಿಸಿದುದರ ಸೂಚಕ. ಸರ್ವಾಧಿಕಾರದ ವಿರುದ್ಧ ಜನತೆಯ ಹೋರಾಟಗಳ ಸಹಾಯಕ್ಕೆ ಬರುವ ಒಂದು ಪ್ರಬಲ ಸರ್ವಾಧಿಕಾರ ವಿರೋಧೀ ಪ್ರಜಾಪ್ರಭುತ್ವವಾದಿ ಶಕ್ತಿಯಾಗಿ ಕಾರ್ಮಿಕ ಚಳುವಳಿ ರೂಪುಗೊಳ್ಳುತ್ತಿದೆ.

ಈಗಾಗಲೇ ಸಾಧಿಸಿರುವ ಒಗ್ಗಟ್ಟನ್ನು ಮತ್ತಷ್ಟು ಬಲಗೊಳಿಸಿ, ದೌರ್ಬಲ್ಯಗಳನ್ನು ನೀಗಿ, ಕಾಂಗ್ರೆಸ್ (ಐ) ಸರಕಾರದ ಕಾರ್ಮಿಕ ವಿರೋಧೀ ಹಾಗೂ ಜನವಿರೋಧೀ ಧೋರಣೆಗಳ ವಿರುದ್ಧ ಹೋರಾಟವನ್ನು ಮುಂದುವರಿಸಬೇಕೆಂದು ಸಮ್ಮೇಳನ ಕರೆ ಕೊಡುತ್ತದೆ.

ಅಸ್ಸಾಂ ಕುರಿತು

ಅಸ್ಸಾಂ ವಿಧಾನ ಸಭೆಯಲ್ಲಿ 119 ಸದಸ್ಯರಲ್ಲಿ 65 ಸದಸ್ಯರ ಸ್ಪಷ್ಟ ಬಹುಮತ ಪಡೆದ ಎಡ ಮತ್ತು ಪ್ರಜಾಪ್ರಭುತ್ವವಾದೀ ಕೂಟದ ಕೇಳಿಕೆಯನ್ನು ಕಡೆಗಣಿಸಿ ಕಾಂಗ್ರೆಸ್ (ಐ)ನ ಅಲ್ಪಮತ ಸರಕಾರವನ್ನು ಹೇರಿದ್ದರ ವಿರುದ್ಧ ಸಮ್ಮೇಳನ ತೀವ್ರವಾಗಿ ಪ್ರತಿಭಟಿಸುತ್ತದೆ. ರಾಜ್ಯಪಾಲರು ಕಾಂಗ್ರೆಸ್ (ಐ) ಪಕ್ಷದ ಕೈಗೊಂಬೆಯಾಗಿ ವರ್ತಿಸಿದ್ದಾರೆ. ರಾಜ್ಯಪಾಲರ ಅಧಿಕಾರಿಗಳನ್ನು ಈ ರೀತಿ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ಭಾರತ ಸರ್ಕಾರ ಈ ಕ್ರಮಗಳನ್ನು ವಾಪಸು ಪಡೆಯಬೇಕೆಂಬ ಸಮ್ಮೇಳನ ಒತ್ತಾಯಿಸುತ್ತದೆ.

ತಮ್ಮ ರಾಜ್ಯ ಹಿಂದುಳಿದಿರುವುದು, ಕೇಂದ್ರ ಸರಕಾರದ ಅಲಕ್ಷ್ಯ ಇತ್ಯಾದಿ ಅಸ್ಸಾಂ ಜನತೆಯ ಕೆಲವು ತೊಂದರೆಗಳಿವೆ. ದೇಶದ ಕಾಂಗ್ರೆಸ್ ಆಡಳಿತಗಾರರ ಧೋರಣೆಗಳ ನೇರ ಫಲವಿದು. ಒಡಕು ತರುವ ಶಕ್ತಿಗಳು, ವಿರೋಧೀ ಸಾಮ್ರಾಜ್ಯಶಾಹೀ ಏಜೆನ್ಸಿಗಳ ಸಹಾಯದಿಂದ ಅಸ್ಸಾಂ ಜನರ ಈ ನಿಜವಾದ ತೊಂದರೆಗಳ ದುರ್ಲಾಭ ಪಡೆದು ಅವರಲ್ಲಿ ಸಂಕುಚಿತ ಮನೋಭಾವನೆ ಹರಡಿ "ವಿದೇಶೀಯರ" ಸಮಸ್ಯೆ ಎಂಬ ಪ್ರತ್ಯೇಕವಾದಿ ಚಳವಳಿ ನಡೆಸುತ್ತಿವೆ.

ಭಾಷಾ ಹಾಗೂ ಮತೀಯ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸುವಾಗ ಪ್ರಜಾಪ್ರಭುತ್ವವಾದೀ ಚಳುವಳಿ, ವಿಶೇಷವಾಗಿ ಸಿ.ಪಿ ಐ (ಎಂ.) ಅವರ ವಿಶೇಷ ಗುರಿ ಕಾರಣ ಪ್ರಜಾಪ್ರಭುತ್ವವಾದೀ ಶಕ್ತಿಗಳು ಪ್ರತ್ಯೇಕತಾವಾದಿಗಳ ಸವಾಲು ಎದುರಿಸಿ ವಿದೇಶೀಯರ ಸಮಸ್ಯೆಗೆ ಪ್ರಜಾಸತ್ತಾತ್ಮಕ ಪರಿಹಾರ ಹುಡುಕಬೇಕೆಂದು ಕೇಳುತ್ತಾ ಬಂದಿವೆ. ಚಳುವಳಿಗಾರರು ಹಾಗೂ ಅವರ ಹಿಂದೆ ಇರುವ ಪ್ರತ್ಯೇಕತಾವಾದಿಗಳು ನಡೆಸಿರುವ ಹಿಂಸಾಚಾರವನ್ನು ಸಮ್ಮೇಳನ ಖಂಡಿಸುತ್ತದೆ.

ಅಸ್ಸಾಂನ ಪಾರ್ಟಿ ಘಟಕ ಈ ಸಂದರ್ಭದಲ್ಲಿ ತಳೆದ ನಿಲುವು ಹಾಗೂ ಚಟುವಟಿಕೆಗಳ ಬಗ್ಗೆ ಸಮ್ಮೇಳನ ಮೆಚ್ಚುಗೆ ವ್ಯಕ್ತಪಡಿಸುತ್ತದೆ. ಪಕ್ಷದ ನೀತಿಬದ್ಧ ನಿಲುವನ್ನು ಧೈರ್ಯದಿಂದ ಪ್ರಚಾರಪಡಿಸುವಾಗ ನಮ್ಮ ನಾಲ್ವರು ಸಂಗಾತಿಗಳ ಕೊಲೆಯಾಗಿದೆ.

ಎಲ್ಲಾ ಜನವಿಭಾಗಗಳಿಗೆ ನ್ಯಾಯಯುತವಾದ ಪರಿಹಾರದ ಆಧಾರ 1971ನ್ನು ಆಧಾರವಾಗಿಟ್ಟುಕೊಂಡು ದೇಶದ ಸಂವಿಧಾನ, ನಾಗರಿಕತೆಯ ಕಾನೂನುಗಳು ಅಂತರಾಷ್ಟ್ರೀಯ ವಚನಬದ್ಧತೆ ಇತ್ಯಾದಿ ಗಮನದಲ್ಲಿಟ್ಟುಕೊಂಡು ಪ್ರಜಾಸತ್ತಾತ್ಮಕ ಪರಿಹಾರ ಕಂಡುಹಿಡಿಯಬೇಕೆಂಬ ಪಕ್ಷದ ನಿಲುವನ್ನು ಸಮ್ಮೇಳನ ಮತ್ತೊಮ್ಮೆ ಒತ್ತಿ

(6ನೇ ಪುಟಕ್ಕೆ)

ಹನ್ನೊಂದನೇ ಅಧಿವೇಶನದ ಠರಾವುಗಳು

(೩ನೇ ಪುಟದಿಂದ)

ಹೇಳುತ್ತದೆ. ಇದರೊಂದಿಗೆ ಅಸ್ಸಾಂ ಜನತೆಯು ನಿಜವಾದ ತೊಂದರೆಗಳನ್ನು ನಿವಾರಿಸುವ ಕ್ರಮ ಕೈಗೊಳ್ಳಬೇಕು.

ಅಸ್ಸಾಂನ ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೆ ಬೆಂಬಲ ಸೂಚಿಸಬೇಕೆಂದು ದೇಶದ ಸಮಗ್ರತೆಯ ಬಗ್ಗೆ ಆಸಕ್ತಿ ಇರುವ ಎಲ್ಲರಿಗೂ ಸಮ್ಮೇಳನ ಕರೆ ನೀಡುತ್ತದೆ.

ರೈಲ್ವೇ ದುರಂತ

ಆಗ್ರಾದಲ್ಲಿ ದಕ್ಷಿಣ ಎಕ್ಸ್‌ಪ್ರೆಸ್ ಗೂಡ್ಸ್ ಗಾಡಿಯೊಂದಿಗೆ ಮುಖಾಮುಖಿ ಢಿಕ್ಕಿ ಹೊಡೆದು 70 ಜನರ ದುಃಖಕರ ಮೃತ್ಯುವಿಗೆ ಕಾರಣವಾದ ರೈಲ್ವೇ ದುರಂತದ ಬಗ್ಗೆ ಸಮ್ಮೇಳನಕ್ಕೆ ತೀವ್ರ ಆಘಾತ ವ್ಯಕ್ತಪಡಿಸುತ್ತದೆ. ಇಂತಹ ದುರಂತಗಳು ಹೆಚ್ಚುತ್ತಿವೆ. ಇವು ರೈಲು ಓಡಿಸುವುದರ ನಿರ್ವಹಣೆಯಲ್ಲಿ, ಮುಂಜಾಗ್ರತಾ ಕ್ರಮಕೈಗೊಳ್ಳುವಲ್ಲಿ, ಹಳೆಯದಾದ ಹಳಿಗಳನ್ನು ಬದಲಾಯಿಸುವಲ್ಲಿ ಹದಗೆಡುತ್ತಿರುವ ಪರಿಸ್ಥಿತಿಯ ಸೂಚಕ. ಈ ಆಕಸ್ಮಿಕಗಳಿಗೆ ರೈಲ್ವೇ ಆಡಳಿತವೇ ಹೊಣೆ ಈ ದುರಂತಗಳ ತನಿಖೆ ನಡೆಸಿ ನಿಜವಾದ ಕಾರಣಗಳನ್ನು ಕಂಡುಹಿಡಿದು ಮುಂದೆ ಇಂತಹ ದುರಂತ ಸಂಭವಿಸದಂತೆ ಕ್ರಮ ಕೈಗೊಳ್ಳಬೇಕೆಂದು ಸಮ್ಮೇಳನ ಸರಕಾರವನ್ನು ಒತ್ತಾಯಿಸುತ್ತದೆ.

ಹರಿಜನರ ಮೇಲಿನ ಅತ್ಯಾಚಾರಗಳನ್ನು ಕುರಿತು

ದೇಶದ ಹೆಚ್ಚಿನ ಕಡೆ, ವಿಶೇಷವಾಗಿ ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಲ್ಲಿ ಹರಿಜನರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳ ಬಗ್ಗೆ ಸಮ್ಮೇಳನ ತೀವ್ರ ಸಿಟ್ಟು ವ್ಯಕ್ತಪಡಿಸುತ್ತದೆ. ಹರಿಜನರ ಸಾಮೂಹಿಕ ಹತ್ಯೆ, ಅವರ ಗುಡಿಸಲುಗಳಿಗೆ ಬೆಂಕಿ ಹಚ್ಚುವುದು, ಲೂಟಿ ನಡೆಸುವುದು, ಹರಿಜನ ಮಹಿಳೆಯರ ಮೇಲೆ ಅತ್ಯಾಚಾರ ನಡೆಸುವುದು ಈ ರಾಜ್ಯಗಳಲ್ಲಿ ಈಗ ಸಾಮಾನ್ಯ ಘಟನೆಗಳಾಗಿವೆ.

ಹರಿಜನರಿಗೆ ಸಮಾನತೆ ಹಾಗೂ ಸಮಾನ ಹಕ್ಕುಗಳ ಟೊಳ್ಳು ಮಾತುಗಳು ಎಷ್ಟೇ ಇದ್ದರೂ ನಾಚಿಕೆಗೇಡು ವಾಸ್ತವತೆಯೆಂದರೆ ಹರಿಜನರ ಶೋಷಣೆ ಎಗ್ಗಿಲ್ಲದೆ ಮುಂದುವರಿಯುತ್ತಿರುವುದು. ಎಲ್ಲಾ ಕ್ಷೇತ್ರಗಳಲ್ಲಿ ಹರಿಜನರ ವಿರುದ್ಧ ಭೇದಭಾವ ನಡೆಸಲಾಗುತ್ತದೆ. ಅವರು ಇನ್ನೂ ಸಮಾಜದ ಅತ್ಯಂತ ಶೋಷಿತ ವಿಭಾಗವಾಗೇ ಉಳಿದಿದ್ದಾರೆ.

ಉತ್ತರ ಪ್ರದೇಶದಲ್ಲಿ ದೇವಲೀ ಹಾಗೂ ಸಾಧುಪುರದಲ್ಲಿನ ಸಾಮೂಹಿಕ ಹತ್ಯೆ ದೇಶ ಅತೀವ ಆಘಾತವುಂಟು ಮಾಡಿವೆ. ಠಕಾಯಿತರ ವಿರುದ್ಧ ಕಾರ್ಯಾಚರಣೆಯ ನೆಪದಲ್ಲಿ ಅಮಾಯಕ ಹರಿಜನರ ಕಗ್ಗೊಲೆ ಮಾಡಲಾಗುತ್ತಿದೆ. ಈ ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಲ್ಲಿನ ಕಾನೂನು ಪರಿಸ್ಥಿತಿ ಮುಂದು ಒಡ್ಡಿರುವ ಹಿನ್ನೆಲೆಯಲ್ಲಿ ಹರಿಜನರ ಮೇಲೆ ದಾಳಿ ಮಾಡುವುದು ಭೂಮಾಲಿಕರಿಗೆ, ಅವರ ಗೂಂಡಾಗಳಿಗೆ, ಪೋಲೀಸರಿಗೆ ಹಾಗೂ ಕಾಂಗ್ರೆಸ್ (ಐ) ಗೂಂಡಾಗಳಿಗೆ ದಿನನಿತ್ಯದ ಆಚರಣೆಯಾಗಿಬಿಟ್ಟಿದೆ.

ಒರಿಸ್ಸಾದಲ್ಲಿ ಕಾಂಗ್ರೆಸ್ (ಐ) ಮಂತ್ರಿಯೊಬ್ಬರ ವೈಯಕ್ತಿಕ ನೇತೃತ್ವದಲ್ಲೇ ಪೋಲೀಸರ ಎದುರೇ ಪರಿಶಿಷ್ಟ ಜಾತೀಯ ಮೀನುಗಾರರ ಮೇಲೆ ಸಶಸ್ತ್ರ ದಾಳಿ ಮಾಡಲಾಗಿದೆ.

ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಅಲ್ಲವಾದರೂ ಮಧ್ಯ ಪ್ರದೇಶ, ಆಂಧ್ರ ಪ್ರದೇಶಗಳೂ ಇತರ ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಲ್ಲೂ ಹಾಗೂ ತಮಿಳು ನಾಡಿನಲ್ಲಿಯೂ ಹರಿಜನರ ವಿರುದ್ಧ ಈ ಅಪರಾಧ ಎಸಗಲಾಗುತ್ತಿದೆ

ಎಡ ನೇತೃತ್ವದ ರಾಜ್ಯಗಳಲ್ಲಿನ ಪರಿಸ್ಥಿತಿ ಇದಕ್ಕೆ ಏಕದಂ ವಿರುದ್ಧವಾಗಿದೆ. ಅಲ್ಲಿ ಹರಿಜನರ ಮೇಲೆ ಅತ್ಯಾಚಾರ ನಡೆಯುವುದಿಲ್ಲ. ಜಮೀನು, ಕೂಲಿ, ಸಮಾನಹಕ್ಕು ಇತ್ಯಾದಿ ಎಲ್ಲಾ ವಿಷಯಗಳಲ್ಲಿ ಹರಿಜನರಿಗೆ ಎಡ ಸರಕಾರಗಳು ಸಂಪೂರ್ಣ ರಕ್ಷಣೆ ನೀಡಿವೆ. ಭೂಮಾಲಿಕರಿಗೆ ಈ ಸರಕಾರಗಳು ಪೋಲೀಸರ ನೆರವು ದೊರಕಿಸಿ ಕೊಡುತ್ತಿಲ್ಲ. ಕೇರಳದಲ್ಲಿ ಎಡ ಪ್ರಜಾಪ್ರಭುತ್ವ ರಂಗ ಸರಕಾರ ರಾಜೀನಾಮೆ ಕೊಟ್ಟು, ಕಾಂಗ್ರೆಸ್ (ಐ) ನೇತೃತ್ವದ ಅಲ್ಪಮತ ಸರಕಾರ ಅಧಿಕಾರಕ್ಕೆ ಬಂದ ಕೆಲವೇ ದಿನಗಳೊಳಗೆ ಎರಡು ಮಕ್ಕಳು ಸೇರಿದಂತೆ ಐದು ಜನರಿದ್ದ ಒಂದು ಹರಿಜನ ಕುಟುಂಬವನ್ನು ಒಬ್ಬ ಭೂಮಾಲಿಕ ಸಾಮೂಹಿಕವಾಗಿ ಹತ್ಯೆ ಮಾಡಿದ.

ಹರಿಜನರ ಮೇಲೆ ಅತ್ಯಾಚಾರ ನಡೆಯುತ್ತಿರುವುದರ ಮೂಲ ಕಾರಣ ಅವರಿಗೆ ಜಮೀನು ಕೊಡಿಸಿ, ಸುಯೋಗ್ಯ ಕೂಲಿ ದೊರೆಯುವಂತೆ ಮಾಡಿ, ಅವರ ಹಕ್ಕುಗಳನ್ನು ರಕ್ಷಿಸಲು ಪ್ರಭಾವಶಾಲೀ ವ್ಯವಸ್ಥೆ ಮಾಡುವುದರಲ್ಲಿ ಕಾಂಗ್ರೆಸ್ ಆಡಳಿತಗಾರರು ವಿಫಲರಾಗಿರುವುದೇ ಆಗಿದೆ ಇಪ್ಪತ್ತಂಶ ಸೇರಿದಂತೆ ಕಾಂಗ್ರೆಸ್ಸಿನ ಯಾವ ಯೋಜನೆಯೂ ಪರಿಸ್ಥಿತಿಯನ್ನು ಬದಲಾಯಿಸಿಲ್ಲ:

ಪಕ್ಷದ ಎಲ್ಲಾ ಘಟಕಗಳು ಹಾಗೂ ಸದಸ್ಯರು ಹರಿಜನರ ಜೀವ, ಆಸ್ತಿ ರಕ್ಷಿಸುವುದರಲ್ಲಿ, ಹರಿಜನ ಮಹಿಳೆಯರ ಮಾನ ರಕ್ಷಿಸುವಲ್ಲಿ ಮುಂಚೂಣಿಯಲ್ಲಿರಬೇಕೆಂದು, ಹರಿಜನರ ಮೇಲೆ ಹೇರಲಾಗುತ್ತಿರುವ ಈ ಅಗೌರವಗಳ ಬಗ್ಗೆ ಜನತೆಯ ಪ್ರಜ್ಞೆಯನ್ನು ಜಾಗೃತಗೊಳಿಸಿ ಅವರು ಹರಿಜನರ ಹೋರಾಟಕ್ಕೆ ಬೆಂಬಲ ಕೊಡುವಂತೆ ಮಾಡಬೇಕೆಂದು ಕರೆಕೊಡುತ್ತದೆ. ನಮ್ಮ ಜನತೆಯ ಅತ್ಯಂತ ಶೋಷಿತ ವಿಭಾಗವಾದ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಕೂಲಿಕಾರರೇ ಇರುವ ಹರಿಜನರು ಸಾಮೂಹಿಕ ಸಂಘಟನೆಗಳಲ್ಲಿ ಸೇರುವಂತೆ ಮಾಡಿ ಅವರಿಗೆ ಅವರ ಹೋರಾಟದಲ್ಲಿ ಶಕ್ತಿ ಹಾಗೂ ಆತ್ಮ ವಿಶ್ವಾಸ ಮೂಡುವಂತೆ ಮಾಡಬೇಕು.

ಸಾಮಾಜಿಕ ಸಮಾನತೆ ಹಾಗೂ ಆರ್ಥಿಕ ಮುನ್ನಡೆ ಸಾಧಿಸುವ ಹರಿಜನರ ಹೋರಾಟದಲ್ಲಿ ಅವರಿಗೆ ಬೆಂಬಲ ಕೊಟ್ಟು ಈ ದಲಿತ ಹಾಗೂ ಶೋಷಿತ ಹರಿಜನರ ಬೆನ್ನಿಗೆ ನಿಲ್ಲಬೇಕೆಂದು ಎಲ್ಲಾ ಪ್ರಜಾಪ್ರಭುತ್ವವಾದೀ ಜನತೆಗೆ ಸಮ್ಮೇಳನ ಮನವಿ ಮಾಡುತ್ತದೆ.

ಸಹಾರೋಯಿ ಅರಬ್ ಜನವಾದಿ ಗಣತಂತ್ರಕ್ಕೆ ಮನ್ನಣೆ

ಪೋಲಿಸಾರಿಯೋ ಸ್ವಾತಂತ್ರ್ಯ ಹೋರಾಟಗಾರರುಹಾಗೂ ಅವರು ಪಶ್ಚಿಮ ಸಹಾರಾದಲ್ಲಿ ಸ್ಥಾಪಿಸಿರುವ ಸಹಾರೋಯಿ ಅರಬ್ ಜನವಾದಿ ಗಣರಾಜ್ಯವನ್ನು ಸಮ್ಮೇಳನ ಅಭಿನಂದಿಸುತ್ತದೆ. ಪಶ್ಚಿಮ ಸಹಾರಾ, ಪೋಲಿಸಾರಿಯೋ ಹಾಗೂ ಈ ಗಣರಾಜ್ಯಕ್ಕೆ ಸಂಪೂರ್ಣ ಸೌಹಾರ್ದತೆ ವ್ಯಕ್ತಪಡಿಸುತ್ತದೆ.

ಈ ದೇಶವನ್ನು ಆಕ್ರಮಿಸಿಕೊಳ್ಳಬೇಕೆಂಬ ಮೊರಾಕ್ಕೋದ ಪ್ರತಿಕ್ರಿಯಾವಾದೀ ಆಡಳಿತದ ವಿರುದ್ಧ ಮಹಾನ್ ವಿಜಯ ಗಳಿಸಿರುವ ಈ ಹೊಸ ಆಫ್ರಿಕನ್ ಗಣರಾಜ್ಯವನ್ನು ಹಲವು ದೇಶಗಳು ಮಾನ್ಯ ಮಾಡಿವೆ. ಭಾರತ ಸರಕಾರವೂ ತಕ್ಷಣ ಈ ಗಣರಾಜ್ಯಕ್ಕೆ ಮನ್ನಣೆ ನೀಡಿ, ರಾಜತಾಂತ್ರಿಕ ಸಂಬಂಧ ಸ್ಥಾಪಿಸಿ ಎಲ್ಲಾ 'ಅಂತರಾಷ್ಟ್ರೀಯ ಸಂಘಟನೆಗಳಲ್ಲಿ ಈ ಗಣರಾಜ್ಯಕ್ಕೆ ಬೆಂಬಲ ಕೊಡಬೇಕೆಂದು ಸಮ್ಮೇಳನ ಒತ್ತಾಯಿಸುತ್ತದೆ.

ಕಂಪೂಚಿಯಾ ಕುರಿತು

ಪ್ರತಿಕ್ರಾಂತಿಕಾರೀ ಪೋಲ್‌ಪೋಟ್ ಆಡಳಿತವುಂಟುಮಾಡಿದ ವಿನಾಶಕಾರೀ ಸ್ಥಿತಿಯಿಂದ ಚೇತರಿಸಿಕೊಂಡು ಅಸ್ತವ್ಯಸ್ತಗೊಂಡ ಆರ್ಥಿಕ ವ್ಯವಸ್ಥೆ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ಪುನರ್‌ರಚನೆಯನ್ನು ಯಶಸ್ವಿಯಾಗಿ ಮಾಡುತ್ತಿರುವ ಕಂಪೂಚಿಯಾದ ಜನತಾ ಕ್ರಾಂತಿಕಾರಿ ಪಕ್ಷಕ್ಕೆ ಸಮ್ಮೇಲನ ಕ್ರಾಂತಿಕಾರಿ ಶುಭಾಶಯ ಕೋರುತ್ತದೆ.

1975ರಲ್ಲಿ ಇಂಡೋ ಚೀನಾದ ಮೂರು ದೇಶಗಳಲ್ಲಿ ಅಪಮಾನಿತರಾಗಿ ಹೊರಗೆಸೆಯಲ್ಪಟ್ಟ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಈಗ ಮತ್ತೆ ವಾಪಸು ಬರಲು ಪ್ರಯತ್ನಿಸುತ್ತಿದ್ದಾರೆ. ಕಂಪೂಚಿಯಾದಲ್ಲಿ ಹೆಂಗ್ ಸಮರೀನ್ ಸರಕಾರ ಬಂದಂದಿನಿಂದ ಥಾಯಲ್ಯಾಂಡ್ ಹಾಗೂ ದಕ್ಷಿಣ ಪೂರ್ವ ಏಷ್ಯಾದ ದೇಶಗಳ ಸಂಘ (ASEAN)ವನ್ನು ಇದಕ್ಕಾಗಿ ಅವರು ಉಪಯೋಗಿಸುತ್ತಿದ್ದಾರೆ ದುರದೃಷ್ಟಕರವೆಂದರೆ ವಿಯಟ್ನಾಂನೊಂದಿಗೆ ಸಂಬಂಧ ಹದಗೆಟ್ಟಿರುವ ಚೀನಾ ಜನತಾ ಗಣರಾಜ್ಯವೂ ಹೆಂಗ್ ಸಮರಿನ್ ಸರಕಾರದ ವಿರುದ್ಧ ನಿಂತಿದೆ.

ಕಂಪೂಚಿಯಾ ಜನತಾ ಪ್ರಜಾತಾಂತ್ರಿಕ ಗಣರಾಜ್ಯದ ವಿರುದ್ಧ ಸಾಮ್ರಾಜ್ಯಶಾಹಿಗಳ ಸಂಚನ್ನು ಸಮ್ಮೇಳನ ಖಂಡಿಸುತ್ತದೆ. ಇಂಡೋ-ಚೀನಾದ ಈ ಮೂರು ದೇಶಗಳು ಹೇಳಿರುವಂತೆ ASEAN ಸ್ಥಳೀಯವಾಗಿ ಈ ಬಗ್ಗೆ ಮಾತುಕತೆ ನಡೆಸಬೇಕು. ಅಮೇರಿಕನ್ ಸಾಮ್ರಾಜ್ಯ ಶಾಹಿಗಳಿಗೆ ಮತ್ತೊಮ್ಮೆ ಇಂಡೋ ಚೀನಾದಲ್ಲಿ ಅವಕಾಶ ಕೊಡಬಾರದು.

ಆರ್ಥಿಕ ವ್ಯವಸ್ಥೆಯನ್ನು ನೆಟ್ಟಗೆ ಮಾಡಿ ದೇಶದಲ್ಲಿಸಮಾಜವಾದ ಕಟ್ಟುವ ಕೆಲಸ ಆರಂಭಿಸುವಲ್ಲಿ ಕಂಪೂಚಿಯಾದ ಜನತೆಗೆ ಸಮ್ಮೇಲನ ಯಶಸ್ಸು ಕೋರುತ್ತದೆ.

ಭಾರತ-ಪಾಕಿಸ್ತಾನ ಸಂಬಂಧಗಳು

ಪಾಕಿಸ್ತಾನದ ಮಿಲಿಟರಿ ಆಡಳಿತ ಅಮೇರಿಕದ ಸಾಮ್ರಾಜ್ಯಶಾಹಿಗಳೊಂದಿಗೆ ಕೈಮಿಲಾಯಿಸಿ ಭಾರತ ಉಪಖಂಡದ ಶಾಂತಿಗೆ ಬೆದರಿಕೆ ಒಡ್ಡಿರುವುದನ್ನು ತೀವ್ರ ಆತಂಕದಿಂದ ಸಿ.ಪಿ.ಐ (ಎಂ) ಅಧಿವೇಶನ ಗಮನಿಸುತ್ತದೆ.

ಇರಾನ್‌ನಿಂದ ಹೊರಗೆಸೆಯಲ್ಪಟ್ಟ ಮೇಲೆ, ಅಫಘಾನಿಸ್ತಾನದಲ್ಲಿ ಮುಖಭಂಗವಾದ ಮೇಲೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಈ ಕ್ಷೇತ್ರದಲ್ಲಿ ತಲೆಹಾಕಲು ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರೀ ಆಡಳಿತವನ್ನು ಕೈಗೊಂಬೆಯಾಗಿ ಉಪಯೋಗಿಸುತ್ತಿದ್ದಾರೆ. ಹೊಸದಾಗಿ ತಂದ ಕಾನೂನಿನಿಂದಾಗಿ ಮೊದಲೇ ಕೊಡಲೊಪ್ಪಿದ್ದ ಅಣು ಇಂಧನ ಕೊಡಲು ನಿರಾಕರಿಸುವ ಅಮೇರಿಕಾ ತನ್ನ ಕಾನೂನುಗಳ ಪ್ರಕಾರವೇ ಪಾಕಿಸ್ತಾನಕ್ಕೆ ಸರಬರಾಜು ಮಾಡಲು ಅವಕಾಶವಿಲ್ಲದಿದ್ದರೂ ಕಾನೂನನ್ನು ತಿದ್ದುಪಡಿಗೊಳಿಸಿ ಶಸ್ತ್ರಾಸ್ತ್ರ ಸರಬರಾಜು ಮಾಡುತ್ತಿದೆ. ಪಾಕಿಸ್ತಾನೀ ಮಿಲಿಟರಿ ಆಡಳಿತ ಕರಾಚಿಯ ಹತ್ತಿರ ನೌಕಾ ಸೈನಿಕ ನೆಲೆಯನ್ನೂ, ಪೇಶಾವರದಲ್ಲಿ ವಿಮಾನ ನೆಲೆಯನ್ನೂ ಅಮೇರಿಕಾಕ್ಕೆ ಕೊಟ್ಟಿದೆ.

ಈ ಹೀನ ಆಟವನ್ನು ಮುಚ್ಚಿಡಲಿಕ್ಕಾಗಿಯೇ ಭಾರತ-ಪಾಕಿಸ್ತಾನ ನಡುವೆ ಯುದ್ಧ ಬೇಡವೆಂಬ ಒಪ್ಪಂದದ ಬಗ್ಗೆ ಪಾಕಿಸ್ತಾನ ಮಾತನಾಡುತ್ತಿದೆ. ಕಾಶ್ಮೀರ ಸಮಸ್ಯೆಯನ್ನು ಜಲ್ವಂತವಾಗಿಟ್ಟು ಕಂಠಮಟ್ಟಕ್ಕೆ ಶಸ್ತ್ರಾಸ್ತ್ರ ಸರಬರಾಜು ಪಡೆದು 'ಯುದ್ಧ ನಿರೋಧ' ಒಪ್ಪಂದದ ಬಗ್ಗೆ ಮಾತನಾಡುತ್ತಿರುವುದನ್ನು ಪ್ರಾಮಾಣಿಕವೆಂದು ಪಕ್ಷದ ಸಮ್ಮೇಳನ ಭಾವಿಸುವುದಿಲ್ಲ. ಎಂದಿನವರೆಗೆ ಪಾಕಿಸ್ತಾನೀ ಆಡಳಿತ ಅಮೇರಿಕನ್ ಸಾಮ್ರಾಜ್ಯಶಾಹಿಗಳ ತಾಳಕ್ಕೆ ಕುಣಿಯುತ್ತಿರುತ್ತಾರೋ ಅಲ್ಲಿಯವರೆಗೆ ನಮ್ಮ ಉಪಖಂಡದಲ್ಲಿ ಶಾಂತಿ, ಸುಭದ್ರತೆ ಸಾಧ್ಯವಿಲ್ಲ ಎಂದು ಭಾರತೀಯ ಜನತೆಗೆ ಸಮ್ಮೇಳನ ಎಚ್ಚರ ಕೊಡಬಯಸುತ್ತದೆ.

ಪ್ರಜಾಪ್ರಭುತ್ವದ ಅಳಿದುಳಿದ ಎಲ್ಲಾ ಲಕ್ಷಣಗಳನ್ನು ದಮನ ಮಾಡಿರುವ ಜಿಯಾ ಆಡಳಿತದಲ್ಲಿ ಪ್ರಜಾಪ್ರಭುತ್ವಕ್ಕಾಗಿ ಪಾಕಿಸ್ತಾನೀ ಜನತೆ ನಡೆಸುತ್ತಿರುವ ಧೀರ ಹೋರಾಟಗಳಿಗೆ ಸಮ್ಮೇಳನ ಬೆಂಬಲ ಹಾಗೂ ಸೌಹಾರ್ದ ವ್ಯಕ್ತಪಡಿಸುತ್ತದೆ. ಮಿಲಿಟರಿ ಸರ್ವಾಧಿಕಾರದ ಇಸ್ಲಾಮಿಕ್ ಕಾನೂನುಗಳೆಂದೆನಿಸಿಕೊಂಡ ಕಾನೂನುಗಳಿಂದ ತೊಂದರೆ ಅನುಸರಿಸುತ್ತಿರುವ ನೆರೆ ದೇಶದ ಜನತೆಗೆ ಪ್ರಜಾಪ್ರಭುತ್ವ ಹಕ್ಕುಗಳನ್ನು ಪುನಃ ಸ್ಥಾಪಿಸುವ ಅವರ ಪ್ರಯತ್ನಗಳಲ್ಲಿ ಯಶಸ್ಸು ದೊರೆಯಲಿ.

ಜನರಿಗೆ ಪರಿಸ್ಥಿತಿಯ ಗಂಭೀರತೆಯನ್ನು ತಿಳಿಯಪಡಿಸಿ ಅಮೇರಿಕನ್ ಸಾಮ್ರಾಜ್ಯಶಾಹಿ ಪಾಕಿಸ್ತಾನೀ ಮಿಲಿಟರಿ ಆಡಳಿತವನ್ನುಪಯೋಗಿಸಿಕೊಂಡು ನಮ್ಮ ದೇಶಕ್ಕೊಡ್ಡಿರುವ ಅಪಾಯ ಎದುರಿಸಲು ಒಟ್ಟು ಸೇರುವಂತೆ ಪ್ರಯತ್ನಿಸಬೇಕೆಂಬ ಸಮ್ಮೇಳನೆ ಎಲ್ಲಾ ದೇಶಪ್ರೇಮೀ ಶಕ್ತಿಗಳಿಗೆ ಕರೆಕೊಡುತ್ತದೆ.

ಗೂಂಡಾ ವರ್ತನೆ ಸಲ್ಲದು!

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳು ಶಾಸಕ ಸಿ. ಎಂ. ಆರ್ಮುಗಂರ ಅವ್ಯವಹಾರದ ಕುರಿತು ಪ್ರಕಟಿಸಿದ ವರದಿಗಳ ಕುರಿತು ಸಿ. ಎಂ. ಆರ್ಮುಗಂ ವ್ಯಕ್ತಪಡಿಸಿದ ಪ್ರತಿಕ್ರಿಯೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೆ.ಜಿ.ಎಫ್. ಸಮಿತಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ

ಸಿ.ಎಂ. ಆರ್ಮುಗಂ, ವರದಿ ಮಾಡಿದ ವರದಿಗಾರರನ್ನು ಬೆದರ್ರಿಸಿದೇ ಅಲ್ಲದೇ ಬೀದಿ ಕಾಳಗಕ್ಕೂ ಸಿದ್ಧಎಂದು ಆಕ್ರೋಷ ವ್ಯಕ್ತಮಾಡಿದ್ದರು.

8-2-82ರಂದು ಸಭೆ ಸೇರಿದ ಪಕ್ಷದ ಸಭೆಯಲ್ಲಿ ಈ ವಿಷಯ ಕುರಿತು ಚರ್ಚಿಸಿ ಗೂಂಡಾ ವರ್ತನೆ ಸಲ್ಲದೆಂದು ಆರ್ಮುಗಂರನ್ನು ಎಚ್ಚರಿಸಲಾಯಿತು. ವರದಿಯಲ್ಲಿ ಸತ್ಯಾಂಶವಿಲ್ಲದೇ ಹೋದಲ್ಲಿ ವರದಿಗಾರರ ಮೇಲೆ ಕಾನೂನು ರೀತ್ಯ ಕ್ರಮಕೈಗೊಳ್ಳುವ ಬದಲು ದೈಹಿಕ ಬೆದರಿಕೆ ನೀಡಿದ್ದು ಪತ್ರಿಕಾ ಸ್ವಾತಂತ್ರ್ಯಕ್ಕೆ ಮಾರಕ ಎಂದು ಸಭೆ ಅಭಿಪ್ರಾಯ ವ್ಯಕ್ತಪಡಿಸಿದೆ. ಸರಕಾರ ಆರ್ಮುಗಂರ ವ್ಯವಹಾರದ ಕುರಿತು ತನಿಖೆ ನಡೆಸಬೇಕೆಂದೂ ಸಭೆ ಒತ್ತಾಯಪಡಿಸಿದೆ.

ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳ ಕುರಿತು ಕೆಜಿಎಫ್. ನಿಂದ ಆರ್ಮುಗಂರ ಬೆಂಬಲಿಗರು ಟ್ರಕ್‌ಗಳಲ್ಲಿ ಬೆಂಗಳೂರಿಗೆ ಆಗಮಿಸಿ ಪ್ರಜಾವಾಣಿ ಕಾರ್ಯಾಲಯದೆದರು ಪ್ರತಿಭಟನೆ ನಡೆಸುವ ದೊಂಬರಾಟವನ್ನು ಮಾಡಿದ್ದಾರೆ ಅಲ್ಲದೇ ಬೆಂಗಳೂರು ನಗರದಲ್ಲಿ ರಾರಾಜಿಸುತ್ತಿರುವ ಆರ್ಮುಗಂರ ಭಾವಚಿತ್ರ ಒಳಗೊಂಡ ಭಿತ್ತಿಪತ್ರಗಳಲ್ಲೂ ಪತ್ರಿಕೆಗಳ ಮೇಲೆ ಆಕ್ರೋಷ ವ್ಯಕ್ತಪಡಿಸುವ ವಿಷಯವಿದೆ.

ಗೋಕಾಕ್ ಸಮಿತಿ ವರದಿಯ ಕುರಿತು ಚರ್ಚೆ

ಕರ್ನಾಟಕ ರಾಜ್ಯದ ಅಲ್ಪಭಾಷಿಕರಲ್ಲಿ ಗೊಂದಲವೆಬ್ಬಿಸಿರುವ ಗೋಕಾಕ್ ಸಮಿತಿ ವರದಿಯ ಕುರಿತು ತಜ್ಞರ ಅಭಿಪ್ರಾಯ ಕೇಳುವ ಅವಕಾಶವನ್ನು ಬೆಂಗಳೂರಿನ ಭಾರತೀಯ ಸಮಾಜ ವಿಜ್ಞಾನಗಳ ಶಾಲೆ(Indian School of Social Science) ಒದಗಿಸಿಕೊಟ್ಟಿತು. ಫೆಬ್ರವರಿ 16ರಂದು ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್‌ನಲ್ಲಿ ಡಾ|| ಬಿ.ಕೆ. ಚಂದ್ರಶೇಖರ ಅಧ್ಯಕ್ಷತೆ ವಹಿಸಿದ್ದರು

ಸಭಿಕರನ್ನುದ್ದೇಶಿಸಿ ಡಾ| ಎಂ. ಚಿದಾನಂದ ಮೂರ್ತಿ, ಕನ್ನಡಪ್ರಭಾ ಸಂಪಾದಕರಾದ ಶ್ರೀ ಖಾದ್ರಿ ಶಾಮಣ್ಣ, ಅಧ್ಯಾಪಕರಾದ ಡಿ ಆರ್ ನಾಗರಾಜ ಇವರು ಗೋಕಾಕ್ ವರದಿ ಪರವಾಗಿಯು ಕೃಷಿ ವಿಶ್ವವಿದ್ಯಾಲಯದ ಡಾ| ಮಮ್ತಾಜ ಅಲೀಖಾನ್ ಅವರು ಅಲ್ಪಭಾಷಿಕರ ಬೆಂಬಲಾರ್ಥವಾಗಿಯೂ ಅಭಿಪ್ರಾಯ ವ್ಯಕ್ತ ಮಾಡಿದರು.

1947 ಅಗಸ್ಟ 15ರಂದೇ ಇಂಗ್ಲೀಷ್ ಭಾಷೆಯ ಹಿರಿತನವನ್ನು ಕಿತ್ತೊಗೆಯಲಾಗಿದೆಯೆಂದು ದಿ. ನೆಹರೂರವರು ಸಾರಿದ್ದರೆ. ಕರ್ನಾಟಕದಲ್ಲಿ ನಾವಿಂದು ಎದುರಿಸುತ್ತಿರುವ ಶಿಕ್ಷಣ ಮಾಧ್ಯಮದ ಸಮಸ್ಯೆಯೇ ಉಂಟಾಗುತ್ತಿರಲಿಲ್ಲವೆಂದು ಹೇಳಿ ಉರ್ದು ಮತ್ತಿನ್ನಿತರ ಅಲ್ಪಭಾಷಿಕರಿಗೆ ತಮ್ಮ ಮಾತೃಭಾಷೆಯಲ್ಲೇ ಶಿಕ್ಷಣ ಕೊಡುವ ವ್ಯವಸ್ಥೆ ಉಳಿಸಿಕೊಂಡು, ರಾಜ್ಯದ ಪ್ರಥಮ ಭಾಷೆಯಾಗಿ ಕನ್ನಡವನ್ನು ಕಲಿಸಿ, ಅದರ ಸಾರ್ವಭೌಮತ್ವವನ್ನು ಉಳಿಸಿಕೊಳ್ಳುವುದು ಅತ್ಯಗತ್ಯವೆಂಬುದನ್ನು ಶ್ರೀ ಖಾದ್ರಿ ಶಾಮಣ್ಣ ಹೇಳಿದರು. ಕರ್ನಾಟಕ ರಾಜ್ಯದಲ್ಲಿ ಜೀವನ ನಡೆಸುತ್ತಿರುವವರೆಲ್ಲ, ಕರ್ನಾಟಕದ ರಾಜ್ಯ, ಕೋರ್ಟು ಭಾಷೆಯಾದ ಕನ್ನಡವನ್ನು ಕಲಿಯಲೇ ಬೇಕೆಂದೂ, ಇಲ್ಲವಾದರೆ ಅಲ್ಪ ಭಾಷಿಕರು ತಮ್ಮ ಪ್ರತ್ಯೇಕತೆಯನ್ನುಳಿಸಿಕೊಂಡು ಹೋದದ್ದಾದರೆ, ಕನ್ನಡಿಗರ ಜೊತೆ ಸಹಬಾಳ್ವೆ ನಡೆಸುವದಕ್ಕೆ ಶಾಂತಿ, ಸುವ್ಯವಸ್ಥೆಗೆ ಆತಂಕ ಉಂಟಾಗುತ್ತದೆಂದೂ ಹೇಳಿದರು ತಮ್ಮ ಭಾಷೆಯಲ್ಲಿ ಪ್ರಾವೀಣ್ಯತೆಯನ್ನು ಪಡೆಯಲು ಗೋಕಾಕ್ ಸಮಿತಿ ಅವಕಾಶ ಮಾಡಿಕೊಟ್ಟಿರುವುದರಿಂದ ಕನ್ನಡ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ಮಾಡಬೇಕೆಂದು ಸೂಚಿಸಿರುವ ಗೋಕಾಕ್ ವರದಿಯನ್ನು ವಿರೋಧಿಸುವುದು ತರವಲ್ಲವೆಂಬ ಅಭಿಪ್ರಾಯ ವ್ಯಕ್ತಮಾಡಿದರು.

ಡಾ| ಮಮ್ತಾಜ ಅಲೀಖಾನ್ ಮಾತನಾಡುತ್ತಾ ಕನ್ನಡ ರಾಜ್ಯಭಾಷೆ ಆಗಲೇಬೇಕೆಂಬುದರ ಕುರಿತು ತನ್ನ ವಿರೋಧವಿಲ್ಲವೆಂದೂ, ಆದರೆ ಇಷ್ಟು ವರ್ಷ ಉರ್ದುವಿನಲ್ಲೇ ಅಭ್ಯಾಸ ಮಾಡಿದ ಮಕ್ಕಳು ಕನ್ನಡದಲ್ಲೇ ಅಭ್ಯಾಸ ಮಾಡುತ್ತಿರುವ ಮಕ್ಕಳಂತೆ ಕನ್ನಡದಲ್ಲಿ ತಜ್ಞತೆ ತೋರಿಸಲು ಸಾಧ್ಯವಾಗಲಾರದಾಗಿರುವದರಿಂದ ಕನ್ನಡಕ್ಕೆ ಪ್ರಥಮ ಭಾಷೆಯೆಂದು 150 ಅಂಕಗಳನ್ನು ಕೊಡದೆ, ಎಲ್ಲ ಭಾಷೆಗಳಿಗೂ ನೂರು ಅಂಕ ಕೊಡುವುದು ಯೋಗ್ಯವೆಂಬಭಿಪ್ರಾಯ ವ್ಯಕ್ತಮಾಡಿದರು.

ಸಭಿಕರಿಂದಲೂ ಕೆಲವರು ಮಾತನಾಡಿ ಪರ ಮತ್ತು ವಿರುದ್ಧ ಅಭಿಪ್ರಾಯ ಸೂಚಿಸಿದರು.

ಅಧ್ಯಕ್ಷತೆ ವಹಿಸಿದ್ದ ಡಾ| ಚಂದ್ರಶೇಖರ ಅವರು ಪ್ರಾಸ್ತಾವಿಕ ಭಾಷಣ ಮಾಡುತ್ತ, ಗೋಕಾಕ್ ಸಮಿತಿ ವರದಿಯನ್ನು ಸಾರ್ವಜನಿಕರಿಗೆ ಒದಗಿಸದಿರುವುದನ್ನು, ಹಾಗೆಯೇ ಆ ವರದಿಯನ್ನು ಓದಿ, ಅಭ್ಯಾಸ ಮಾಡದೆ ವಿಧಾನಸಭೆಯಲ್ಲಿ ಸದಸ್ಯರು ಅಭಿಪ್ರಾಯ ವ್ಯಕ್ತ ಮಾಡಿರುವುದನ್ನು, ಹೊರಗೆ ಅಲ್ಪಭಾಷಿಕರ ಮುಖಂಡರು ಉರ್ದು ಮತ್ತಿನ್ನಿತರ ಅಲ್ಪಭಾಷಿಕರ ಭಾಷೆಗಳ ಸಂರಕ್ಷಣೆಯ ಹೆಸರಿನಲ್ಲಿ ನಡೆಸುತ್ತಿರುವ ಚಳುವಳಿಯನ್ನು ಖಂಡಿಸಿ, ವರದಿಯನ್ನು ಅಭ್ಯಾಸಮಾಡಿ, ಅರ್ಥಮಾಡಿಕೊಂಡು, ಅದರಲ್ಲಿ ತಿದ್ದುಪಡಿ ಬೇಕಿದ್ದರೆ, ಚರ್ಚೆಮಾಡಿ ಸಮಸ್ಯೆ ಬಗೆಹರಿಸುವರು ಸುಗಮ ಮಾರ್ಗವೆಂದೂ, ಇಲ್ಲವಾದಲ್ಲಿ ಕೋಮುದ್ವೇಷ ಬೆಳೆಯುವ ಸಂಭವವಿದೆಯೆಂದೂ ಹೇಳಿದರು.

ಈ ರೀತಿಯ ಚರ್ಚಾಗೋಷ್ಠಿಗಳನ್ನು ಮುಂದೆಯೂ ನಡೆಸಿಕೊಂಡು ಹೋಗಲಾಗುವುದೆಂದೂ ಅವರು ಹೇಳಿದರು

ಇದೇ ರೀತಿಯ ಚರ್ಚೆ ಇದರ ಪ್ರದೇಶಗಳಲ್ಲೂ ನಡೆಸುವದು ಅತ್ಯಗತ್ಯ. ಇದರಿಂದ ಜಾತೀಯ, ಭಾಷಿಕ ದ್ವೇಷಶಮನಗೊಳಿಸಲು ಜನರಲ್ಲಿ ಸೌಹಾರ್ದತೆಉಂಟು ಮಾಡಲು ತಪ್ಪು ತಿಳುವಳಿಕೆ ದೂರ ಮಾಡಲು ಸಹಾಯವಾಗುವುದು.

ವರದಿ ಎಸ್ಕೆ.

ಎಲ್‌ಸಾಲ್ವಡೋರ್‌ನಲ್ಲಿ ರಾಸಾಯನಿಕ ಅಸ್ತ್ರಗಳ ಬಳಕೆ

"ಲ್ಯಾಟಿನ್ ಅಮೆರಿಕಾ ಕುರಿತ ರೀಗನ್ ಅವರ ವ್ಯೂಹೋಪಾಯ ಸಿದ್ಧಾಂತದ ಪರೀಕ್ಷೆಗೆ ಸಾಲ್ವಡೋರ್ ಪ್ರಥಮ ಗುರಿಯಾಗಿದೆ" ಎಂದು ಅಮೆರಿಕಾ ಸಾಲ್ವಡೋರ್ ಜನತೆಯ ವಿರುದ್ಧ ರಾಸಾಯನಿಕ ಅಸ್ತ್ರಗಳು ಮತ್ತು ನಾಪಾ ಬಳಸಿದುದರ ಸಂಬಂಧದಲ್ಲಿ 'ಇಝ್ವೆಸ್ತಿಯಾ' ಬರೆದಿದೆ. ಸಾಲ್ವಡೋರ್‌ನಲ್ಲಿ ಸಂಭವಿಸುತ್ತಿರುವುದನ್ನು ನೋಡಿದರೆ ಯಾವನೇ ಒಬ್ಬ ನಿಷ್ಪಕ್ಷಪಾತಿ ಅದು ಮಿಲಿಟರಿ ಕೊಲೆಗಡುಕರ ಸರಕಾರದ ವಿರುದ್ಧ ಪಡೆಯುತ್ತಿರುವ ನಿಜವಾದ ಜನತಾ ಯುದ್ಧ ಎಂದು ತಿಳಿಯಬಹುದೆಂದು ಪಾಶ್ಚಿಮಾತ್ಯ ದೇಶಗಳಲ್ಲಿ ಕೂಡ ಇದೇ ರೀತಿ ಭಾವಿಸಲಾಗಿದೆಯೆಂದೂ ಅದು ಬರೆದಿದೆ.

ಯೂರೋಪ್ ಮತ್ತು ಕ್ಯಾರಿಬಿಯನ್ ಭೂಪ್ರದೇಶವನ್ನು ವ್ಯೂಹೋಪಾಯ ದೃಷ್ಟಿಯಿಂದ ಪ್ರಮುಖವಾದ ತನ್ನ ದಕ್ಷಿಣ ಪಾರ್ಶ್ವ ಎಂದು ಘೋಷಿಸುತ್ತಾ ಅಮೆರಿಕಾ ಈ ಪ್ರಕ್ಷುಬ್ಧ ಪ್ರದೇಶದಲ್ಲಿ ರಾಷ್ಟ್ರೀಯ ವಿಮೋಚನ ಚಳುವಳಿಯನ್ನು ಅಡಗಿಸಲು ತನ್ನೆಲ್ಲ ಯತ್ನಗಳನ್ನು ನಡೆಸುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ಸಾಲ್ವಡೋರ್‌ನಲ್ಲಿ 30 ಸಾವಿರಕ್ಕೂ ಹೆಚ್ಚು ಮಂದಿ ಅಸುನೀಗಿದರು. ಇದು ಮುದುಕರು, ಮಹಿಳೆಯರು ಮತ್ತು ಮಕ್ಕಳು ಸೇರಿರುವ ಶಾಂತಿ ನಾಗರಿಕರ ಸಾವಿನ ಸಂಖ್ಯೆ.

ಆದರೆ ಜನತೆಯ ಪ್ರತಿಭಟನೆಯನ್ನು ಅಡಗಿಸಲು ಜುಂಟಾ ಅಸಮರ್ಥವಾಗಿದೆ. ಫರಬಂದೊಮರ್ತಿ ರಾಷ್ಟ್ರೀಯ ವಿಮೋಚನಾರಂಗ ಅನೇಕ ಜಿಲ್ಲೆಗಳನ್ನು ನಿಯಂತ್ರಿಸುತ್ತಿದ್ದು ರಾಜಧಾನಿಯೂ ಒಳಗೊಂಡಂತೆ ದೇಶಾದ್ಯಂತ ಹೋರಾಟಗಳನ್ನು ನಡೆಸುತ್ತಿದೆ ಎಂದು ಪತ್ರಿಕೆ ಹೇಳಿದೆ.

('ಸೋವಿಯತ್ ಸಮಾಚಾರ'ದಿಂದ)

ಬಯಲ ಜೇಲಿನಲ್ಲಿ

ಹಸಿರು ಗಿರಿಶ್ರೇಣಿಗಳ ನಡುವೆ
ಹಿಮರಾಶಿಗಳ ಸರಿದಾಟ
ಕಣಿವೆಗಳ ನಡುವಿನಲಿ
ನದಿಯ ಸುಂದರ ಬಳುಕಾಟ
ನಿಸರ್ಗದ ಮೌನದಾಳದಿಂದ
ಹಕ್ಕಿ ಪಕ್ಷಿಗಳ ಉಲಿದಾಟ
ಚಿಗುರು ಮರಗಳ ತಂಪಿನಡಿಯಲ್ಲಿ
ನಳನಳಿಸುವ ಕಾಫಿ ತೋಟ
ಪ್ರಕೃತಿಯ ನಯನ ಮನೋಹರ ನೋಟ.

ಆದರೆ ಗೆಳೆಯಾ,

ಮಲೆನಾಡ ಮರೆಯಲ್ಲಿ
ಸಿಡಿವ ನೋವಿನ ನೂರು ಹಾಡುಗಳು
ಕಮರಿ ಹೋಗುತ್ತಿವೆ ನೀರವತೆಯಲ್ಲಿ ಲೀನವಾಗಿ
ಶ್ರೇಣಿಯಾಗಿ ಹಬ್ಬಿರುವ ಸಾಲುಸಾಲಿನ ಬೆಟ್ಟಗಳಲ್ಲಿ
ಮುಚ್ಚಿ ಹೋಗುತ್ತಿದೆ ರಕ್ತ-ಬೆವರು ಬಸಿದವರ ಬದುಕು
ಬೆರಕೆ ಸಂಸ್ಕೃತಿಯ ತೋಟ ದೊಡೆಯರ ಸೊಕ್ಕಿನಲ್ಲಿ
ಕೊಚ್ಚಿ ಹೋಗುತ್ತಿದೆ ಜೀವನ್ಮರಣಗಳ ಹೋರಾಟ
ಮುಂಗಾರು ಮಳೆಯ ಭೋರ್ಗರೆವ ನದಿಯಲ್ಲಿ
ಮುಳುಗುತ್ತಾ ತೇಲುತ್ತಾ ಸಾಗುತ್ತಿದೆ ಕೂಲಿಕಾರರ ಬದುಕು
ಕಾನೂನು ಕಾಯಿದೆಗಳ
ಸ್ವಪ್ನವೈಭವವಾಲಿಂಗನಕ್ಕೆ ಸಿಕ್ಕಿ ಸಮುದ್ರಾಭಿಮುಖವಾಗಿ
ಯಜಮಾನರ ಉರಿನೋಟಕ್ಕೆ
ತಣ್ಣಗಾಗುವ ರಕ್ತದವರು ಈ ಗುಲಾಮರು
ಹೇಳದೆ-ಹೇಳಿಕೊಳ್ಳಲಾಗದೆ
ಕೋವಿ ಮದ್ದಿನ ಕಮಟುವಾಸನೆಯಲ್ಲಿ
ಕೊರಗುತ್ತಾ
ತಪ್ಪಿಸಿಕೊಳ್ಳದೆ-ತಪ್ಪಿಸಿಕೊಳ್ಳಲಾಗದೆ
ಬದುಕ ಸವೆಸುತ್ತಿದ್ದಾರೆ
ಬಯಲ ಜೇಲಿನಲ್ಲಿ

— 'ಉದಯ'

(ಅಂತರ್ ಕಾಲೇಜು ವಿಧ್ಯಾರ್ಥಿ ಕವಿ ಸಮ್ಮೇಳನದಲ್ಲಿ ಬಹುಮಾನಿತ ಕವನ)

ಮೆಲ್ಲಗೆ ಕೊಲ್ಲುವ ಮಾರಕಾಸ್ತ್ರ

ಅಮೆರಿಕ ಇದೀಗ "ಗ್ಯಾಮ ಅಸ್ತ್ರ" ವೊಂದನ್ನು ತಯಾರಿಸಿದೆ. ಮಾನವನು ಊಹಿಸಲಾರದಷ್ಟು ನಷ್ಟವುಂಟು ಮಾಡುವ ಮಾರಕಾಸ್ತ್ರವಿದು.

ಈ ಅಸ್ತ್ರದ ವಿಶೇಷವೆಂದರೆ ಇದು ಯಾವ ತರಹದ ಶಬ್ದವೂ ಇಲ್ಲದೆ ಸ್ಫೋಟವೂ ಇಲ್ಲದೆ ಒಂದು ನಿಯಮಿತ ಕಾಲದವರೆಗೂ ಪರಿಣಾಮವನ್ನುಂಟು ಮಾಡಿ ಶಾಂತವಾಗುವುದು. ಆದರೆ ಶಾಂತವಾಗುವ ಮುನ್ನ ಒಂದು ಜೀವವೂ ಉಳಿಯುವುದಿಲ್ಲ.

ಈ ಮಾರಕಾಸ್ತ್ರದ ತಯಾರಿಕೆಗೆ ಒಂದು ಕ್ವಿಂಟಾಲ್ ಇಷ್ಟನೇ ಮಾದರಿ ಯುರೇನಿಯಮ್ ಬೇಕಾಗುತ್ತದೆ. ಇದು ಉಣ್ಣೆಯ ಜಮಖಾನದಂತೆ ಒಂದು ಸಾವಿರ ಚದರ ಮೈಲಿಗಳಲ್ಲಿರುವ ಜೀವ ಜಂತುಗಳನ್ನು ತನ್ನ ಕಿರಣಗಳ ಹರಡುವಿಕೆಯಿಂದ ನಾಶ ಮಾಡವುದು.

–ಟಿ. ಗೋಪಾಲಕೃಷ್ಣ

(ಪ್ರಜಾವಾಣಿ ಕೃಪೆ)

ಎಸ್.ಎಫ್.ಐ. ವತಿಯಿಂದ ಅರ್ಜಿ ಫಾರಂ ವಿತರಣೆ

ರಾಜ್ಯ ಸರಕಾರವು ನಾನ್ ಗೆಜೆಟೆಡ್ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಭರ್ತಿ ಮಾಡಲು ಆಗಾಗ ಅರ್ಜಿಗಳನ್ನು ಆಹ್ವಾನಿಸುತ್ತಿರುತ್ತಾರೆ. ಲಾಭಕೋರರು ಈ ಅರ್ಜಫಾರಂಗಳನ್ನು ಹೆಚ್ಚಿನ ಬೆಲೆಗೆ ಮಾರುತ್ತಾರೆ (ಈ ಫಾರಂಗಳ ಬೆಲೆ 1ರೂ. 25 ಪೈಸೆ ಮಾತ್ರ).

ಅರ್ಜಿ ಸಲ್ಲಿಸ ಬಯಸುವ ವಿಧ್ಯಾರ್ಥಿಗಳಿಗೆ ನಿಗದಿ ಪಡಿಸಿದ ದರದಲ್ಲೇ ವಿತರಣೆ ಮಾಡಲು ಹರಪನಹಳ್ಳಿಯ ಎಸ್.ಎಫ್.ಐ. ಘಟಕ ಮುಂದೆ ಬಂದಿದೆ.

ಸಂಬಂಧಪಟ್ಟವರು ಸದುಪಯೋಗ ಪಡೆಯಬೇಕೆಂದು ಹರಪನಹಳ್ಳಿ ಎಸ್.ಎಫ್.ಐ. ಘಟಕದ ಕಾಂ| ರಾಜಾಸಾಹೇಬ್ ವಿನಂತಿಸಿದ್ದಾರೆ.

ಸಿಮೆಂಟ್ ಹಗರಣ !—
ಗುಂಡುರಾವ್ ಬಲಿ ?

(1ನೇ ಪುಟದಿಂದ)

ಸರಕಾರಿ ಕೆಲಸಗಳಿಗಾಗಿಯೇ ಕೇಂದ್ರದಿಂದ ಕಳುಹಿಸಿಕೊಡಲಾಗಿದೆಂದೂ ಮಂತ್ರಿ ಮಾಣಿಕರಾವ್ ಪಾಟೀಲರೇ ಒಪ್ಪಿಕೊಂಡಿದ್ದಾರೆ. ಇದರಿಂದಲೇ 4 ಸಾವಿರ ಟನ್ ಸಿಮೆಂಟನ್ನು ಗಗನ ಚುಂಬಿ ಕಟ್ಟಡಗಳ ಮಾಲಿಕರಿಗೆ ಒದಗಿಸಲಾಗಿದೆಂಬುದನ್ನೂ ಅದೇ ಮಂತ್ರಿ ಮಹಾಶಯರು ಒಪ್ಪಿಕೊಳ್ಳುತ್ತಾರೆ. ಕೇಂದ್ರದಿಂದ ಬಂದ ಸಿಮೆಂಟನ್ನು ನೀರಾವರಿ, ನೀರು ಸರಬರಾಜು ಜನತಾ ಗೃಹ ಮತ್ತಿನ್ನಿತರ ಸರಕಾರಿ ಅಭಿವೃದ್ಧಿ ಯೋಜನೆಗಳಿಗಾಗಿಯೇ ವಿನಿಯೋಗಿಸಬೇಕೆಂದೂ, ಖಾಸಗೀ ಮನೆ ಕಟ್ಟುವವರಿಗೆ ಅದನ್ನು ಒದಗಿಸುವುದು ಸರಿಯಲ್ಲವೆಂದೂ ಕೈಗಾರಿಕೆ ಖಾತೆಯ ಕಾರ್ಯದರ್ಶಿ ಮತ್ತು ಕೈಗಾರಿಕಾ ಡೈರೆಕ್ಟರರು ವಿರೋಧಿಸಿದರೂ ಕೇಳದೆ ಈ ರೀತಿ ಮಾಡಲಾಯಿತು. ಈಗಾಗಲೇ ಸಿಮೆಂಟನ್ನು ಒದಗಿಸಿದ್ದು, ಅದನ್ನು ಉಪಯೋಗಿಸಿದ ಬಗ್ಗೆ ಸರಿಯಾದ ಸರ್ಟಿಫಿಕೇಟ್ ಕೊಡದ ಕಂಟ್ರಾಕ್ಟರಿಗೆ ಸಿಮೆಂಟ್ ಕೊಡಲಾಗಿದೆ. ಯಾಕೆಂದರೆ ಸಿಮೆಂಟ್ ಮಂಜೂರ ಮಾಡುವ "ಮೂಲಭೂತ ಹಕ್ಕು" ಸರಕಾರದ್ದು ಎಂಬ ಕಾರಣದಿಂದ ಅಧಿಕಾರಿಗಳ ಸಲಹೆ ಮೀರಿ ಮಂಜೂರಾತಿ ನೀಡಲಾಗಿದೆ.

ಉತ್ತಮ ಆಡಳಿತಗಾರನೆಂದು ತಾಯಿ ಮತ್ತು ಮಗನಿಂದ ಶಬಾಸ್‌ಗಿರಿ ಪಡೆದ ಗುಂಡೂರಾಯರ ಆಡಳಿತೆ ವೈಖರಿಯ ಒಂದೆರಡು ಉದಾಹರಣೆ ಇಲ್ಲಿದೆ ನೋಡಿರಿ: ಕಳೆದೆರಡು ವರ್ಷಗಳಲ್ಲಿ ವಿದ್ಯುಚ್ಛಕ್ತಿ-ನೀರಾವರಿ ಯೋಜನೆಗಳಿಗೆ ಸಾಕಷ್ಟು ಸಿಮೆಂಟ್ ಸಿಗಲಾರದಂಥ ಪರಿಸ್ಥಿತಿ ಇದ್ದರೂ, ಶೇ. 60 ರಷ್ಟು ಸಿಮೆಂಟನ್ನು ಸರಕಾರೇತರ ಖಾಸಗೀ ಕೆಲಸಕ್ಕೆ ಮೀಸಲಿಡಲಾಗಿತ್ತು. ಈ ವರ್ಷಗಳಲ್ಲಿ ನಮ್ಮ ರಾಜ್ಯಕ್ಕೆ ಕೊಡ ಮಾಡಿದಕ್ಕಿಂತಲೂ ಮೀರಿ ಹೆಚ್ಚಿನ ಪರ್ಮಿಟ್ಟನ್ನು ನೀಡಲಾಗಿತ್ತು. 1981 ಅಕ್ಟೋಬರ, ನವೆಂಬರ, ಡಿಸೆಂಬರ ಹೀಗೆ ಮೂರು ತಿಂಗಳಿಗಾಗಿ 28,900 ಟನ್ ಕೊಡ ಮಾಡಿದ್ದರಲ್ಲಿ, ಅಕ್ಟೋಬರ ಒಂದೇ ತಿಂಗಳಲ್ಲಿ 23,554 ಟನ್ ಸಿಮೆಂಟನ್ನು ಭಾರಿ ಪ್ರಮಾಣದ ಸಿಮೆಂಟ್ ಬಳಕೆಗಾರರಿಗೆ ಕೊಡಲಾಗಿದೆ. ಇದೇ ಸಮಯದಲ್ಲಿ ಸ್ವಂತ ಮನೆ ಕಟ್ಟುವವರಿಗೆ, ರಿಪೇರಿ ಮಾಡುವವರಿಗೆ ಕೊಟ್ಟ ಸಿಮೆಂಟ್ 1980-81ರಲ್ಲಿ 3,70,975 ಟನ್ನಿನಿಂದ 1981-82ರಲ್ಲಿ 3,65,635ಕ್ಕೆ ಇಳಿಯಿತು. ಜುಲೈ-ಸೆಪ್ಟೆಂಬರ 1981ರಲ್ಲಿ ಸಾರ್ವಜನಿಕರಿಗೆ ನಿಜವಾಗಿಯೂ ಬಿಡುಗಡೆ ಮಾಡಿದ್ದು ಬರೇ ಶೇ. 62 ರಷ್ಟು ಮಾತ್ರ.

ಸಿಮೆಂಟಿನ ಅಭಾವದಿಂದಾಗಿ ಸರಕಾರೀ ಕಾಮಗಾರಿಗಳು ಕುಂಟುತ್ತ ನಡೆಯುತ್ತಿರುವಾಗ, ಸಾರ್ವಜನಿಕರಿಗೆ ಸಣ್ಣ ಪುಟ್ಟ ಕೆಲಸಗಳಿಗೂ ಸಿಮೆಂಟ್ ಸಿಗದಿರುವಾಗ, ಬಹು ಅಂತಸ್ತಿನ ಕಟ್ಟಡಗಳ ನಿರ್ಮಾಣಕ್ಕೆ ಸಾವಿರಾರು ಟನ್ ಸಿಮೆಂಟ್ ಒದಗಿಸಿದ್ದನ್ನು ಒಪ್ಪಿಕೊಂಡಿರುವ ಮಂತ್ರಿ ಮಾಣಿಕರಾವ್ ಪಾಟೀಲರು "ನಾವೇನು ಸಿಮೆಂಟನ್ನು ರಸೆಲ್ ಮಾರ್ಕೆಟ್ಟನಲ್ಲಿ ಹರಾಜು ಮಾಡಿಲ್ಲ" ಎಂದು ಏರಿದ ಧ್ವನಿಯಲ್ಲಿ ಪತ್ರಿಕಾಕರ್ತರಿಗೆ ತಿಳಿಸಿದರಂತೆ. ಹರಾಜು ಮಾಡಿ ದುಡ್ಡು ಗಳಿಸಿದರೆ ಯಾರಾದರೂ ಮಾಫಿ ಮಾಡಬಹುದು. ಆದರೆ ಕೈಮುಚ್ಚಿ ತೆಗೆದುಕೊಳ್ಳುವುದು ಸಾರ್ವಜನಿಕ ದೃಷ್ಟಿಯಲ್ಲಿ ಅಕ್ಷಮ್ಯವೆಂಬುದನ್ನು ಮಂತ್ರಿ ಮಹಾಶಯರು ತಿಳಿಯಬೇಕು.

ತನಗೆ ಅಧಿಕಾರವಿದೆಂದು ಮನಬಂದಂತೆ ವರ್ತಿಸಿದರೆ ಜನರು ಕ್ಷಮಿಸಲಿಕ್ಕಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಈ ರೀತಿಯ ವಿತರಣೆಯನ್ನು ವಿರೋಧಿಸಿರುವುದಾಗಿ ಸಮಿತಿ ಮುಂದೆ ಸಾಕ್ಷಿ ನೀಡಿದ್ದಾರೆ. ಕಾಂಗ್ರೆ ಸದಸ್ಯರೂ ಈ ಸಾಕ್ಷಿಗಳನ್ನು ಸ್ವಂತ ಕಿವಿಯಿಂದಲೇ ಕೇಳಿದ್ದಾರೆ. ಮುಂದಿನ ವಿಧಾನ ಸಭೆಯಲ್ಲಿ ಈ ವಿಷಯ ಚರ್ಜೆಗೆ ಬರುವಾಗ ಕಾಂಗ್ರೆ ಸದಸ್ಯರ ಹೇಳಿಕೆಯನ್ನು !ಗಮನವಿಟ್ಟು ಕೇಳುವುದು ಅತ್ಯಗತ್ಯ. ಹಾಗೆಯೇ ಮಂತ್ರಿಗಳ ಅವ್ಯವಹಾರದ ಕುರಿತು ಸಮಿತಿಗೆ ಮಾಹಿತಿ ನೀಡಿರುವ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಂಡಿದ್ದಾದರೆ ಈ ಕಾಂಗ್ರೆ ಸದಸ್ಯರು ಏನು ಮಾಡುತ್ತಾರೆಂಬದನ್ನೂ ನೋಡಬೇಕಾಗಿದೆ.

ರೇಣುಕಾ ರಾಜೇಂದ್ರನ್ ಪ್ರಕರಣವನ್ನು ಬಯಲಿಗೆಳೆಯುವಾಗ ಕೆಲವು ಅಧಿಕಾರಿಗಳ ಬಲಿಯಾಯಿತು. ಈಗ ಸಿಮೆಂಟ್ ಹಗರಣದಲ್ಲಿ ಯಾರು ಬಲಿ ಪಶುಗಳಾಗುತ್ತಾರೆ ನೋ ೯ ಡ ಬೇ ೯ ಕು. ಅಂತುಳೆಯವರು ಉಳಿದು ಅಳಿಯಬೇಕಾಯಿತು. ಗುಂಡೂರಾಯರು ಉಳಿಯುತ್ತಾರೋ ಹೇಗೆ ನೋಡೋಣ. ಮಹಾರಾಷ್ಟ್ರದಲ್ಲಿ ವಿರೋಧ ಪಕ್ಷದವರು ಕೋರ್ಟಿಗೆ ಹೋಗಿ ಅಂತುಳೆಯವರನ್ನು ಅಳಿಸಿದರು. ಕರ್ನಾಟಕದಲ್ಲಿ ಆ ರೀತಿ ಕೋರ್ಟು ಕಟ್ಟೆ ಹತ್ತಿ ಗುಂಡೂರಾಯರನ್ನು ಅಳಿಸುವವರಿದ್ದಾರೆಯೇ ?

ಎನ್. ಕೆ. ಉಪಾಧ್ಯಾಯ

ಕನಿಷ್ಟ ವೇತನ ಒತ್ತಾಯಿಸಿ

ಮೈಸೂರಿನಲ್ಲಿ ಧರಣಿ

15-2-1982ರಂದು ಹೋಟೆಲ್ ನೌಕರರಿಗೆ ಕನಿಷ್ಟ ವೇತನವನ್ನು ನಿಗದಿಪಡಿಸಲು ಒತ್ತಾಯಿಸಿ ಮೈಸೂರಿನಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಲಾಯಿತು. ಮೈಸೂರು ಡಿಸ್ಟ್ರಿಕ್ಟ್ ಹೋಟೆಲ್ ವರ್ಕರ್ಸ್ ಯೂನಿಯನ್ ಆಶ್ರಯದಲ್ಲಿ ನಡೆದ ಈ ಧರಣಿ ಸತ್ಯಾಗ್ರಹದಲ್ಲಿ ಅಧಿಕ ಸಂಖ್ಯೆಯಲ್ಲಿ ಹೋಟೆಲ್ ಕಾರ್ಮಿಕರು ಭಾಗವಹಿಸಿದ್ದರು.

1976ನೇ ಇಸವಿಯಿಂದ ಇದುವರೆಗೆ 6 ವರ್ಷಗಳಾದರೂ ಹೋಟೆಲ್ ಕಾರ್ಮಿಕರಿಗೆ ಕನಿಷ್ಟ ವೇತನ ನಿಗದಿಪಡಿಸಿಲ್ಲ. 8 ಗಂಟೆ ಕೆಲಸ, ವಾರದ ರಜ, ವಾರ್ಷಿಕ ರಜ ಇತ್ಯಾದಿ ಸೌಲಭ್ಯಗಳನ್ನು ಬಹಳಷ್ಟು ಹೋಟೆಲ್ ಮಾಲೀಕರು ನೌಕರರಿಗೆ ನೀಡದೆ ಅವರ ಶೋಷಣೆಯಾಗುತ್ತಿದೆ. ಇದನ್ನೆಲ್ಲಾ ಪ್ರತಿಭಟಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು ಹೋಟೆಲ್ ಕಾರ್ಮಿಕರ ಸಂಘದ ಅಧ್ಯಕ್ಷರಾದ ಕಾ॥ ಮೋಹನ್‌ಕುಮಾರ್ ಮತ್ತು ಪ್ರಧಾನ ಕಾರ್ಯದರ್ಶಿ ಕಾ॥ ಕೆ. ಎ. ಪುಟ್ಟಪ್ಪ ಧರಣಿ ಸತ್ಯಾಗ್ರಹದ ಮುಖಂಡತ್ವ ವಹಿಸಿದ್ದರು.

ದುಬಾರಿ ಮನೆ ತೆರಿಗೆ: ಪ್ರತಿಭಟಿಸಲು ಕರೆ

ಸುಳ್ಯ ಮತ್ತಿತರ ತಾಲೂಕುಗಳ ಅನೇಕ ಪಂಚ್ಯಾತ್ ಮತ್ತು ಮುನಿಸಿಪಾಲಿಟಿಗಳಲ್ಲಿ ಮನೆ ತೆರಿಗೆಯನ್ನು ಸಂಬಂಧಿಸಿದ ಆಡಳಿತ ವರ್ಗಗಳು ದುಬಾರಿಯಾಗಿ ಏರಿಸಿದ್ದು ಜನಸಾಮಾನ್ಯರಿಗೆ ಇದು ತೀರಾ ಸಂಕಷ್ಟವನ್ನು ತಂದೊಡ್ಡಿದೆ. ಮೊದಲೇ ಬಾರೀ ಬೆಲೆ ಏರಿಕೆಯಿಂದ ಜೀವನ ನಡೆಸುವುದೇ ಕಷ್ಟಕರವಾಗಿರುವ ಈ ಸಂದರ್ಭದಲ್ಲಿ ಈ ರೀತಿ ಮಿತಿ ಮೀರಿದ ಮನೆ ತೆರಿಗೆ ಹೇರುವ ಸರಕಾರದ ನೀತಿಯು ಜನತೆಯ ಶೋಷಣೆ ಮಾಡುವಂತಾಗಿದೆ. ಆದುದರಿಂದ ಎಲ್ಲಾ ಜನತೆ ಸರಕಾರದ ಮನೆ ತೆರಿಗೆ ರೀತಿಯನ್ನು ಪ್ರತಿಭಟಿಸಲು ಮುಂದಾಗಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ದ.ಕ. ಜಿಲ್ಲಾ ಸಮಿತಿ ಸಭೆಯು ತಾ. 7ರಂದು ಜರುಗಿದಾಗ ಕೈಗೊಂಡ ನಿರ್ಣಯ ಒತ್ತಾಯಿಸಿದೆ ಎಂದು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ। ಕೆ. ಆರ್. ಶ್ರೀಯಾನರು ನೀಡಿದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅದೇ ರೀತಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಗ್ರಾಹಕರಿಂದ ಮೀಟರ್ ಡಿಪಾಜಿಟನ್ನು ವಸೂಲು ಮಾಡುತ್ತಿದ್ದು ಇದು ಹಗಲು ದರೋಡೆಯಾಗಿದೆ. ಮಂಡಲಿಯ ಭ್ರಷ್ಟ ಆಡಳಿತೆಯಿಂದಾಗಿ ಅದು ದಿವಾಳಿ ಅಂಚಿನಲ್ಲಿರುವುದನ್ನು ತಪ್ಪಿಸಲು ಈ ರೀತಿ ಗ್ರಾಹಕರ ಮೀಟರಿನ ಮೇಲೆ ಡಿಪಾಜಿಟನ್ನು ವಸೂಲಿ ಮಾಡಲು ಹೊರಟಿರುವುದು ತೀರಾ ಖಂಡನೀಯ. ಆದುದರಿಂದ ವಿದ್ಯುಚ್ಛಕ್ತಿ ಮಂಡಲಿಯ ಈ ಕ್ರಮವನ್ನು ಕೂಡಲೇ ನಿಲ್ಲಿಸಬೇಕೆಂದೂ, ಜನತೆ ಈ ಪ್ರತಿಭಟನೆ ನೀಡಲು ಒಂದಾಗಬೇಕೆಂದು ಜಿಲ್ಲಾ ಸಮಿತಿ ಕರೆ ನೀಡಿದೆ. ●

ಎಸ್.ಎಫ್.ಐ ವಾರ್ಷಿಕೋತ್ಸವ

29–1–82ರಂದು ರಾಯಚೂರಿನ ಎಸ್.ಎಫ್.ಐ. ಘಟಕವು ಹನ್ನೊಂದನೇ ವಾರ್ಷಿಕೋತ್ಸವ ಆಚರಿಸಿತು.

ಈ ಕಾರ್ಯಕ್ರಮದ ಅಂಗವಾಗಿ 28–1–82ರಂದು ಚರ್ಚಾಸ್ಪರ್ಧೆಗಳು ನಡೆದವು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಎಸ್ ಎಫ್.ಐ. ಹುತಾತ್ಮ ಸಂಗಾತಿಗಳಾದ ಕಾಂ। ರೂರ್ ಸಿಂಗ್ ಮತ್ತು ಕಾಂ। ರಾಜನ್ ನೆನಪಿನ ಪರ್ಯಾಯ ಪಾರಿತೋಷಕವನ್ನಿಡಲಾಗಿತ್ತು.

ಹೈಸ್ಕೂಲು ವಿಧ್ಯಾರ್ಥಿಗಳಿಗಾಗಿ 'ಶಿಕ್ಷಣದಲ್ಲಿ ಕನ್ನಡ ಅವಶ್ಯವೇ ?' ಎಂಬ ಚರ್ಚಾಸ್ಪರ್ಧೆಯನ್ನಿಡಲಾಗಿತ್ತು. ಈ ಸ್ಪರ್ಧೆಯಲ್ಲಿ ಮೆಥಡಿಸ್ಟ ಹೈಸ್ಕೂಲು ವಿಧ್ಯಾರ್ಥಿಗಳು 'ರಾಜನ್ ಪರ್ಯಾಯ ಪಾರಿತೋಷಕ'ವನ್ನು ಗೆದ್ದುಕೊಂಡರು.

ಕಾಲೇಜು ಮಟ್ಟದಲ್ಲಿ 'ವಿಧ್ಯಾರ್ಥಿಗಳಿಗೆ ರಾಜಕೀಯ ಅವಶ್ಯವೇ ?' ಎಂಬುದು ಸ್ಪರ್ಧೆಯ ವಿಷಯವಾಗಿತ್ತು. ಈ ಸ್ಪರ್ಧೆಯಲ್ಲಿ ಎಲ್.ವಿ.ಡಿ. ಕಾಲೇಜ್ ವಿಧ್ಯಾರ್ಥಿಗಳು ಪ್ರಥಮ ಬಹುಮಾನವಾಗಿ ರೂರ್‌ಸಿಂಗ್ ಪರ್ಯಾಯ ಪಾರಿತೋಷಕವನ್ನು ಗೆದ್ದುಕೊಂಡರು.

29–1–82ರಂದು ನಗರದ ಶಾಲಾ ಕಾಲೇಜು ವಿಧ್ಯಾರ್ಥಿಗಳು ಮೆರವಣಿಗೆ ಹೊರಡಿಸಿ ಸ್ಥಳೀಯ ಕರ್ನಾಟಕ ಸಂಘದಲ್ಲಿ ಸೇರಿದರು. ಕಾಂ। ಸೈಯದ್ ನೂರುದ್ದೀನ್ ಎಸ್.ಎಫ್.ಐ. ಧ್ವಜ ರೋಹಣ ಮಾಡಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಜಿಲ್ಲೆಯ ಖಾಸಗಿ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಬಂಡುರಾವ್ ಹಾಗೂ ಲೇಖಕಿ ಬಿ.ಟಿ. ಲಲಿತಾ ನಾಯ್ಕ ಆಗಮಸಿದ್ದರು.

ಎಸ್.ಎಫ್.ಐ. ಸಾಧನೆ ಕುರಿತು ಕಾಂ। ಮಲ್ಲಯ್ಯ ಮಾತನಾಡಿದರು. ಕೊನೆಯಲ್ಲಿ ಕಾಂ। ಚನ್ನವೀರಪ್ಪ ವಂದಿಸಿದರು.

ತಾಲ್ಲೂಕು ರೈತ ಸಮ್ಮೇಳನ

15-2-82ರಂದು ಉಳ್ಳಾಲದ ಪಿಲಾರಿನಲ್ಲಿ, ಮಂಗಳೂರು ತಾಲ್ಲೂಕ್ 7ನೇ ರೈತ ಸಮ್ಮೇಳನವು ಜರುಗಿತು. ಪ್ರತಿನಿಧಿ ಸಭೆಯ ಅಧ್ಯಕ್ಷತೆಯನ್ನು ಕಾಂ। ರಂಗಪ್ಪ ಶ್ರೀಯಾನ್ ವಹಿಸಿದ್ದರು.

ಸಂಘಟನೆಯ ಬಗ್ಗೆ ಹಾಗೂ ಕರ್ನಾಟಕ ಭೂಸುಧಾರಣಾ ಕಾಯಿದೆಯ ಕುರಿತು, ರೈತ ಬೆಳೆದ ಬೆಳೆಗೆ ನ್ಯಾಯ ಬೆಲೆ ಸಿಗುವ ವಿಚಾರದ ಕುರಿತು ಪ್ರತಿನಿಧಿಗಳು ಚರ್ಚೆ ನಡೆಸಿದರು.

ಈ ಕೆಳಕಂಡ ಠರಾವುಗಳನ್ನು ಮಂಜೂರು ಮಾಡಲಾಯಿತು.

1) ರೈತರು ಬೆಳೆಸಿದ ಬೆಳೆಗೆ ನ್ಯಾಯವಾದ ಬೆಲೆ ಸಿಗಬೇಕು;

2) ಕೆ. ಇ. ಬಿ. ಯವರು, ಡಿಪಾಸಿಟ್ ಕಟ್ಟಬೇಕೆಂದು ಒತ್ತಾಯಿಸುವದನ್ನು ನಿಲ್ಲಿಸಬೇಕು;

3) ರೈತರ ಬಾಕಿ ಸಾಲಗಳನ್ನು ಮಾಫಿ ಮಾಡಲು ಸರಕಾರ ಮುಂದಾಗಬೇಕು;

4) ಹಳೇ ಗೇಣಿಗೆ ದಾವೆ ಹೂಡಿದ್ದನ್ನು ವಾಪಸು ತೆಗೆದುಕೊಳ್ಳಬೇಕು;

5) ರಾಸಾಯನಿಕ ಗೊಬ್ಬರವನ್ನು ಕಡಿಮೆ ದರದಲ್ಲಿ ಪೂರೈಸಲು ಸರಕಾರ ಕ್ರಮ ಕೈಗೊಳ್ಳಬೇಕು;

6) ಕೃಷಿ ಕಾರ್ಮಿಕರಿಗೆ ಪ್ರಾಯ ಸಂದಾಗ ನಿವೃತ್ತಿ ವೇತನ ಕೊಡಬೇಕು;

7) ಭೂನ್ಯಾಯ ಮಂಡಳಿಯು ಕೃಷಿ ಭೂಮಿ ಅಲ್ಲವೆಂದು ನಿರಾಕರಿಸಿದ ಒಕ್ಕಲುದಾರರ ಅರ್ಜಿಗಳನ್ನು ಪುನಃ ತನಿಖೆ ನಡೆಸಬೇಕು.

8) ಮನೆ ತೆರಿಗೆ ಹೆಚ್ಚಿಸಲು ಸರಕಾರವು ಪಂಚಾಯತಿಗಳಿಗೆ ಆದೇಶ ನೀಡುವುದನ್ನು ವಿರೋಧಿಸುವ;

9) ಕೊಟೆಕಾರಿನ ಕಾಚಾರು ಸುಂಕವನ್ನು ದುರಸ್ತಿಪಡಿಸಬೇಕೆಂದು ಒತ್ತಾಯಿಸುವ;

10) ಉಳ್ಳಾಲ ರೈಲ್ವೇಸುಂಕದ ಸಾರ್ವಜನಿಕ ಕಾಲುದಾರಿಯನ್ನು ದುರಸ್ತಿ ಮಾಡಬೇಕು...

ಸಮ್ಮೇಳನದ ಅಂಗವಾಗಿ ಅದೇ ದಿನ ಸಾಯಂಕಾಲ ತೆಕ್ಕೋಟೆನಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ। ಅಬ್ರಹಾಂ ಕರ್ಕಡ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾಂ। ಜನಾರ್ಧನ ನಾಯಕ್, ಸೂರ್ಯನಾರಾಯಣ ಭಟ್, ಯಳಚಿತ್ತಾಯ ಮೊದಲಾದವರು ಮಾತನಾಡಿದರು.

31 ಜನರ ಮಂಗಳೂರು ತಾಲ್ಲೂಕು ಪಾವೂರು ಬಾಬು ಅಧ್ಯಕ್ಷರಾಗಿಯೂ, ಪಿ. ಪರಮೇಶ್ವರ ಶೆಟ್ಟಿ ಮತ್ತು ಎಂ. ಎಸ್. ನಾರಾಯಣ ಉಪಾಧ್ಯಕ್ಷರುಗಳಾಗಿ, ಕಾರ್ಯದರ್ಶಿಯಾಗಿ ಜೆ. ಕೃಷ್ಣಪ್ಪ, ಜೊತೆ ಕಾರ್ಯದರ್ಶಿಗಳಾಗಿ ಸುಂದರ ಸಾಲಿಯಾನ್ ಮತ್ತು ರಾಮಚಂದ್ರ ಉಚ್ಚಿಲ್ ಚುನಾಯಿತರಾಗಿದ್ದಾರೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office : L-56, K. V. Temple Street, Sultanpet, Bangalore-560 053. Phone-:4154. Printed at Ravee Tradets, No. 8/1, J. M. Lane, Balepet Cross, Bangalore-560 053. EDITOR : M. K. BHAT.